ಸಂಹಿತೆಗಳು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಸ್. ಬಂಗಾರಪ್ಪ: (ಮುಖ್ಯಮಂತ್ರಿಗಳು):- 1992ನೇ ಸಾಲಿನ ಕರ್ನಾಟಕ ವೃತ್ತಿಗಳು, ಕಸುಬುಗಳು, ಅಜೀವಿಕೆಗಳು ಮತ್ತು ಉದ್ಯೋಗಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಛೇರ್ಮನ್:- ಪ್ರಸ್ತಾವ ಏನೆಂದರೆ, 1992ನೇ ಸಾಲಿನ ಕರ್ನಾಟಕ ವೃತ್ತಿಗಳು, ಕಸಬುಗಳು, ಅಜೀವಿಕೆಗಳು ಮತ್ತು ಉದ್ಯೋಗಗಳ ಮೇಲಣ ತೆರಿಗೆ(ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಸೂದೆಗೆ ಒಪ್ಪಿಗೆ ನೀಡಲಾಯಿತು

3. 1992ನೇ ಸಾಲಿನ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕ ಪರ್ಯಾಲೇಚನಾ ಪ್ರಸ್ತಾವ

ಶ್ರೀ ಎಸ್.ಬಂಗಾರಪ್ಪ: (ಮುಖ್ಯಮಂತ್ರಿಗಳು):-ಮಾನ್ಯ ಅಧ್ಯಕ್ಷರೇ, 1992ನೇ ಸಾಲಿನ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೇಚಿಸಬೇಕೆಂದು ಕೋರುತ್ತೇನೆ.

The question was proposed.

Sri. S.BANGARAPPA :- A small amendement is there. It is the Karnataka Entertainments Tax (Amendment) Bill. This bill seeks to provide a provision for apportioning 90% of the amounts collected as surcharge to the local bodies.

ಇದು ಲೋಕಲ್ ಬಾಡೀಸ್‌ನಲ್ಲಿ ಇರತಕ್ಕಂತಹ 90 ಪರ್ಸೆಂಟ್ ಹಣವನ್ನು ಅವರಿಗೆ ಕೊಡುವುದಕ್ಕೋಸ್ಕರ ಈ ಒಂದು ತಿದ್ದುಪಡಿಯನ್ನು ತರುತ್ತಿದ್ದೇವೆ. ಇದನ್ನು ಬಿಟ್ಟರೆ there are no other purposes. Only one single small amendment. ನಾವು ಏನುಕಲೆಕ್ಟ್ ಮಾಡುತ್ತೇವೆ, ಅದರಲ್ಲಿ ಲೋಕಲ್ ಬಾಡೀಸ್‌ಗೆ 90 ಪರ್ಸೆಂಟ್ ಹೋಗುತ್ತದೆ.

ಶ್ರೀ ಡಿ.ಬಿ.ಚಂದ್ರೇಗೌಡ:- ಮೊದಲು ಕರ್ನಾಟಕದ ಒಳಗಡೆ ತಯಾರು ಮಾಡಿದಂತ ಚಿತ್ರಗಳಿಗೆ ಮಾತ್ರ ಶೇಕಡ 50 ತೆರಿಗೆ ಎಂದು ಇತ್ತು. ಹೊರಗಡೆ ಬಂದು ಮಾಡಿದರೂ ಕೂಡ ಅಷ್ಟೆ. It is stated the Statementof Objects and Reasons :

"After examining the representation made by the Karnataka Film Chamber of Commerece it was considered necessary to extend 50% concession in Entertainment Tax to all Kannada, Kodava, Konkani or Tulu films cosered before 31-12-1987"

ಅಂದರೆ ಇದ್ದ ರಿಸ್ಟ್ರಿಕ್ಟ್ ತೆಗೆದಿದ್ದೀರಿ ಎಂದು ಆಯಿತು.

"irrespective of whetherthe film has been produced within Karnataka or outside and without any time limit"

ಎಂದು ರಿಸ್ಟ್ರಿಕ್ಷನ್ ಟೈಮ್ ಲಿಮಿಟ್‌ನ್ನು ತೆಗೆದಿದ್ದೀರಿ, ಪ್ರೊಡಕ್ಷನ್ ಕರ್ನಾಟಕದ ಒಳಗೆ ಆಗಬೇಕೆಂದು

ಮಾಡಿದ್ದೀರಿ.

ಶ್ರೀ ಎಸ್.ಬಂಗಾರಪ್ಪ:-ಎರಡನೆ ಪಾಯಿಂಟ್‌ನಲ್ಲಿ ಅದೂ ಇದೆ. ಮೊದಲನೆಯದು ಏನೆಂದರೆ, ಫಿಲಮ್ ಚೇಂಬರ್ ಆಫ್ ಕಾಮರ್ಸ್ ಅವರು ಕೆಲವು ರೆಪ್ರೆಸೆಂಟ್‌ಷನ್ಸ್ ಕೊಟ್ಟರು. ಅದು ಏನೆಂದರೆ, ಶೇಕಡ 50 ರಷ್ಟು ಕನ್‌ಸೇಷನ್ ಇನ್ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಇದೆಯಲ್ಲ ಅದನ್ನು ಕನ್ನಡ, ಕೊಡವ, ಕೊಂಕಣಿ ಮತ್ತು ತುಳು ಭಾಷೆಗಳ ಚಿತ್ರಗಳಿಗೂ ಕೊಡಬೇಕು, ಕೊಡವ, ತುಳು, ಕೊಂಕಣಿ ಭಾಷೆಯಲ್ಲಿ ಅಪರೂಪವಾಗಿ ಎಲ್ಲೋ ಒಂದೊಂದು ಚಲನಚಿತ್ರವನ್ನು ತೆಗೆಯುತ್ತಾರೆ, ಇವುಗಳಿಗೂ ಕನ್ಸೇಷನ್ ಕೊಡಬೇಕು, ಅಮೇಲೆ 31-12-1987 ಕ್ಕಿಂತ ಮುಂಚೆ ತಯಾರಾಗಿರತಕ್ಕಂಥವುಗಳಿಗೂ ಕೂಡ ಕನ್‌ಸೇಷನ್ ಕೊಡಬೇಕು ಎಂದು ರೆಪ್ರಸೆಂಟೇಷನ್ ಕೊಟ್ಟರು. Whether these films representing these languages. ಅದು ಈ ಭಾಷೆಗಳಲ್ಲಿ ತಯಾರಾಗಿರತಕ್ಕಂಥ ಚಿತ್ರಗಳಿಗೂ ಕೊಡಬೇಕು ಎನ್ನತಕ್ಕಂಥಾದ್ದು. ಅದು ಕರ್ನಾಟಕ ಇರಬಹುದು ಅಥವಾ ಔಟ್‌ಸೈಡ್ ಕರ್ನಾಟಕ ಇರಬಹುದು. ವಿತ್‌ಔಟ್ ಎನಿ ಟೈಮ್ ಲಿಮಿಟ್ ಮಾಡಬೇಕು ಎನ್ನತಕ್ಕಂಥದ್ದು. ಏಕೆಂದರೆ, ಆಭಾಷೆಯ ಚಲನಚಿತ್ರಗಳು ಅಪರೂಪವಾಗಿ ಬರುತ್ತವೆ ಎನ್ನತಕ್ಕಂಥ ದೃಷ್ಟಿಯಲ್ಲಿಮಾಡಿದ್ದೇವೆ. ಇವು 1987 ಕ್ಕಿಂತ ಮುಂಚೆ ಮಾಡಿರತಕ್ಕುವು.

ಶ್ರೀ ಡಿ.ಬಿ.ಚಂದ್ರೇಗೌಡ : (ವಿರೋಧ ಪಕ್ಷದನಾಯಕರು):- ಒಟ್ಟು ಚಲನಚಿತ್ರ ಕನ್ನಡೀಕರಿಸಬೇಕು ಎನ್ನುವುದು ಮೂಲ ಉದ್ದೇಶ. ಬರೀ ಚಿತ್ರ ತೆಗೆದ ಕೂಡಲೆ ಕನ್ನಡೀಕರಣ ಆಗುವುದಿಲ್ಲ. ಅದಕ್ಕೆ ಬೇಕಾದಂತಹ ಪೂರ ವ್ಯವಸ್ಥೆಗಳೆಲ್ಲ ಕರ್ನಾಟಕದಲ್ಲಿ ಆಗಬೇಕು. Exploitation of the entire film should be done well with in the State limits. ಇದನ್ನು ಏಕೆ ಮಾಡಿದೆವು ಎಂದರೆ, ಈ ಒಂದು ಸಿನಿಮಾ ರಂಗಕ್ಕೆ ಸಂಬಂಧಪಟ್ಟದ್ದು, ಈ ಒಂದು ಇಂಡಸ್ಟ್ರಿಗೆ ಸಂಬಂಧಪಟ್ಟದ್ದು ಎಲ್ಲವೂ ಕರ್ನಾಟಕದಲ್ಲಿ ಅಭಿವೃಧಿ ಆಗಬೇಕು. ಎಲ್ಲೋ ಹೋಗಿ ಅಂದರೆ ತಮಿಳುನಾಡಿನಲ್ಲಿ, ಮದರಾಸ್‌ನಲ್ಲಿ ಪ್ರೋಸೆಸ್ ಮಾಡಿಕೊಂಡು, ಬೊಂಬಾಯಿಯಲ್ಲಿ ಪ್ರೊಸೆಸ್ ಮಾಡಿಕೊಂಡು, ಗೋವಾದಲ್ಲಿ ಪ್ರೊಸೆಸ್ ಮಾಡಿಕೊಂಡು ಕನ್ನಡ ಫಿಲಂ ತೆಗೆದಿದ್ದೇವೆ ಎಂದು ಹೇಳಿದರೆ ನೀವು ಅದಕ್ಕೆ ಶೇಕಡ 50 ರಷ್ಟು ತೆರಿಗೆ ವಿನಾಯಿತಿ ಕೊಟ್ಟರೆ ಹೇಗೆ ? ಅದು ಇಲ್ಲಿ ಆಗಬೇಕು, ಸ್ಥಳೀಯವಾಗಿ ಆಗಬೇಕು ಎನ್ನತಕ್ಕಂಥಾದ್ದು ಉದ್ದೇಶ. ಆ ಉದ್ದೇಶಕ್ಕಾಗಿಯೇ ಶೇಕಡ 50 ರಷ್ಟು ತೆರಿಗೆ ವಿನಾಯಿತಿ ಈಗ ಆ ಉದ್ದೇಶಕ್ಕೆ ಭಂಗ ಬರುವ ಹಾಗೆ ನೀವು ಈ ಶಾಸನ ತಂದು ಬಿಟ್ಟಿರಿ. ಇದರಿಂದ ಒಟ್ಟು ಉದ್ದೇಶಕ್ಕೇ ಭಂಗ ಬರುತ್ತದೆ. ಆದ್ದರಿಂದ ದಯಮಾಡಿ ನೀವು ಸ್ವಲ್ಪಯೋಚನೆ. ನೀವು ವಿನಾಯಿತಿ ಕೊಡತಕ್ಕಂಥ ನಮ್ಮದು ಸಂಪೂರ್ಣವಾದಂತ ಸ್ವಾಗತ ಇದೆ. ತುಳುಗೂ ಕೊಡಿ, ಕೊಂಕಣಿಗೂ ಕೊಡಿ ಅಥವಾ ಇನ್ನು ಯಾವುದೇ ಕನ್ನಡದ ಡೈರೆಕ್ಷನ್ ಏನು ಇರುತ್ತದೆ ಅದಕ್ಕೆ ವಿನಾಯಿತಿ ಕೊಡತಕ್ಕಂಥದ್ದರಲ್ಲಿ ನಮ್ಮದು ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಆದರೆ, ಕರ್ನಾಟಕದಲ್ಲಿ ಅಲ್ಲ, ಕರ್ನಾಟಕೇತರವಾಗಿ ಎಕ್ಸ್‌ಪ್ಲಾಯಿಟ್ ಮಾಡತಕ್ಕಂಥ, ಕನ್ನಡದ ಹೆಸರಿನಲ್ಲಿ ಏನು ಚಿತ್ರಗಳನ್ನು ಮಾಡುತ್ತಾರೆ, ಅದಕ್ಕೆ ಕೊಡತಕ್ಕಂಥಾದ್ದು ಸರಿಯೇ ಎನ್ನುವುದನ್ನು ವಿಚಾರ ಮಾಡಿ.

ಶ್ರೀ ಎಸ್ .ಬಂಗಾರಪ್ಪ :- ಈ ವಿಚಾರದ ಬಗ್ಗೆ ನಾವು ಹೆಚ್ಚಾಗಿ ಗಮನ ಇಟ್ಟರೆ ಸಾಕು. ಈಗ ಕನ್ನಡಕ್ಕೆ ಬೆಂಬಲ ಕೊಡಬೇಕು ಎನ್ನುವುದರ ಬಗ್ಗೆ ಪ್ರಶ್ನೆ ಏನೂ ಇಲ್ಲ. ಇದರಲ್ಲಿ ಹೆಚ್ಚಾಗಿ ಕೊಡವ, ಕೊಂಕಣಿ ಮತ್ತು ತುಳು ಫಿಲಮ್ಸ್ ಏನಿವೆ ಅವಕ್ಕೂ ಕೂಡ ವಿನಾಯಿತಿ ಸಿಗಲಿ

ಎನ್ನತಕ್ಕಂಥಾದ್ದು ಉದ್ದೇಶ. ಇದರಲ್ಲಿ ಕನ್ನಡವನ್ನೂ ಕೂಡ ಸೇರಿಸಿದ್ದೇವೆ. ಈಗ 31-12-1987ಕ್ಕೆ ನಾವು ಆ ಅರೀತಿ ಮಾಡಿ ಕನ್‌ಸೇಷನ್ ಕೊಡುವುದರಿಂದ ಇನ್ನೂ ಕೂಡ ಅವರಿಗೆ ಹೆಚ್ಚಾಗಿ ಉಪಯೋಗ ಆಗುತ್ತದೆ. ಇದರಿಂದ ಯಾರಿಗೂ ತೊಂದರೆ ಆಗತಕ್ಕಂಥ ವಿಚಾರವೇ ಇಲ್ಲ.

Sri. D.B.CHANDREGOWDA :- In the explanatory Statement:

"It was considered necessary to extend 50% concession in entertainment tax to all Kannada, Kodava, Konkani or Tulu films censored before 31-12-1987."

ಇದನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. ಇದರ ಬಗ್ಗೆ ನಮ್ಮದೇನೂ ಅಭ್ಯಂತರ ಇಲ್ಲ.

"irrespective of whether the film has been produced within the State of Karnataka or Outside."

ಈ ಔಟ್‌ಸೈಡ್ ಎನ್ನುವ ಪದ ಏನಿದೆ ಇದಕ್ಕೆ ನಮ್ಮ ಅಭ್ಯಂತರ ಇದೆ. "... irrespective of whether the film has been produced within the State of Karnataka or outside.." ಇದು ಸ್ವಾಗತಾರ್ಹವಾದುದು. ಈ ವಿಚಾರದಲ್ಲಿ ನಾವು ಅನೇಕ ಸಲ ಹೇಳಿದ್ದೇವೆ. But outside without any time limit ತಾವು ಈಗ ಏನು ಹೇಳುತ್ತೀರಿ, ಯಾರು ಎಷ್ಟೇ ಕನ್ನಡ ಫಿಲಮ್ ತೆಗೆದಿರಲಿ, ಎಲ್ಲೇ ತೆಗೆದಿರಲಿ, ವಿದೇಶದಲ್ಲಿ ತೆಗೆದಿರಲಿ ಅದಕ್ಕೆ 50 ಪರ್‌ಸೆಂಟ್ ತೆರಿಗೆ ವಿನಾಯಿತಿ ಕೊಡಿ ಎಂದು ಕೇಳಬಹುದು. ಸಿನಿಮಾ ತೆಗೆಯುವುದಕ್ಕೆ ಸಿಂಗ್‌ಪುರ್‌ಗೆ ಹೋಗಿ ಅಲ್ಲಿ ಒಂದು ಕನ್ನಡ ಫಿಲಂ ತೆಗೆದು ಇಲ್ಲಿ ತೆಗೆದುಕೊಂಡು ಬಂದು ಅದಕ್ಕೆ ಶೇಕಡ 50 ರಷ್ಟು ತೆರಿಗೆ ವಿನಾಯತಿ ಕೊಡಿ ಎಂದು ಕೇಳಿದರೆ ಅದು It does not fit into the thinking ಬೇಸಿಕ್ ತಿಂಕಿಂಗ್ ಏನಿದೆ ಅದಕ್ಕೆ ಹೊಂದಿಕೊಳ್ಳುವುದಿಲ್ಲ. ಆದ್ದರಿಂದ ಮರು ಪರಿಶೀಲನೆ ಮಾಡಿ ಎಂದು ಕೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: (ಚಾಮರಾಜನಗರ):- ಇದರ ಬಗ್ಗೆ ವಿವರಣೆಯನ್ನು ಕೊಟ್ಟರೆ ನಾನು ಮಾತನಾಡುತ್ತೇನೆ. ಮಾನ್ಯ ಅಧ್ಯಕ್ಷರೆ, ಕೊಂಕಣಿ ಭಾಷಾ ಚಿತ್ರಗಳಿಗೆ ವಿನಾಯಿತಿ ಕೊಡುವುದಕ್ಕೆ ನಮ್ಮ ಅಭ್ಯಂತರವಿಲ್ಲ. ತುಳು ಭಾಷಾ ಚಿತ್ರಗಳಿಗೆ ಕೊಡುವುದಕ್ಕೆ ನಮಗೆ ಅಭ್ಯಂತರವಿಲ್ಲ, ಕೊಡವ ಚಿತ್ರಗಳಿಗೆ ಕೊಡುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಇಲ್ಲಿಮೂಲಭೂತವಾಗಿ ಪ್ರಶ್ನೆ ಏನೆಂದರೆ, ನಮಗೆ ಬಹಳ ಆಘಾತ ಮತ್ತು ನೋವು ಆಗುತ್ತಿರುವುದೆಂದರೆ, 50 ಪರ್ಸೆಂಟ್ ಮನರಂಜನಾ ತೆರಿಗೆಯ ವಿನಾಯಿತಿಯನ್ನು ಕರ್ನಾಟಕ ರಾಜ್ಯವನ್ನು ಬಿಟ್ಟು ಹೊರ ರಾಜ್ಯಗಳಲ್ಲಿ ತೆಗೆದಂಥ ಚಿತ್ರಗಳಿಗೂ ತಾವು ಕೊಡುತ್ತಿದ್ದೀರಿ. ಇದು ಬಹಳ ಪ್ರಮುಖವಾದುದು. ತಾವು ತುಳು ಭಾಷೆಯ ಬೆಳವಣಿಗೆಗೆ, ಆ ಚಿತ್ರಗಳಿಗೆ ಎಷ್ಟು ಬೇಕಾದರೂ ಬೆಂಬಲವನ್ನು ಕೊಡಿ, ಅದಕ್ಕೆ ನಮ್ಮ ಬೆಂಬಲ ಇದೆ. ಕೊಂಕಣಿ ಭಾಷೆ, ಕೊಡವ ಭಾಷೆ, ಇವೆಲ್ಲಾ ಕನ್ನಡದ ಸುತ್ತ ಇರತಕ್ಕ ಸಹೋದರಿ ಭಾಷೆಗಳು. ಇದರ ಬಗ್ಗೆ ನಮ್ಮದು ಯಾವ ಅಭ್ಯಂತರವೂ ಇಲ್ಲ. ಇವತ್ತು ಕರ್ನಾಟಕದಲ್ಲಿ ಕನ್ನಡ ಚಿತ್ರರಂಗ ಬೆಳೆಯಬೇಕಾಗಿದೆ, ಕನ್ನಡ ಚಿತ್ರ ರಂಗಕ್ಕೆ ಅಪಾರವಾದ ಒಂದು ಭವಿಷ್ಯವಿದೆ. ಕನ್ನಡ ಚಿತ್ರ ರಂಗದ ಬೆಳವಣಿಗೆಗೆ ಸರ್ಕಾರ

ಅನೇಕರೀತಿಯ ಬೆಂಬಲವನ್ನು ಕೊಟ್ಟಿದೆ. ಸಬ್ಸಿಡಿಯನ್ನು ಜಾಸ್ತಿ ಮಾಡಿದ್ದಾರೆ. ಇನ್ನೂ ಬೇರೆ ಬೇರೆ ಸೌಲಭ್ಯಗಳನ್ನು ನೀಡಿದ್ದಾರೆ. ಸುಮಾರು 30 ವರ್ಷಗಳ ಹಿಂದೆ ನಮ್ಮ ಕನ್ನಡ ಚಿತ್ರ ರಂಗ ತೀರಾ ಕೆಳಗಡೆ ಇದ್ದಂಥ ಸಂದರ್ಭದಲ್ಲಿ ಒಂದು ಲಕ್ಷ ರೂಪಾಯಿ ಖರ್ಚುಮಾಡಿ ಕನ್ನಡ ಚಿತ್ರವನ್ನು ತೆಗೆಯುವುದು ಕಷ್ಟವಾಗಿತ್ತು. ಆದರೆ ಇವತ್ತು ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕನ್ನಡ ಚಿತ್ರವನ್ನು ತೆಗೆಯತಕ್ಕ ವಾತಾವರಣ ಇದೆ, ಈ ಒಂದು ಮಾರುಕಟ್ಟೆ ನಮ್ಮ ಕರ್ನಾಟಕ ಮತ್ತು ಗಡಿ ಪ್ರದೇಶದಲ್ಲಿ ಸಿಕ್ಕಿದೆ. ಇವತ್ತು ಈ ಪರಿಸ್ಥಿತಿಯನ್ನು ನಾವು ವಿಶ್ಲೇಷಣೆ ಮಾಡಿದಾಗ ಕನ್ನಡ ಚಿತ್ರಗಳನ್ನು ತೆಗೆಯುತ್ತಿರುವವರು ಕನ್ನಡಿಗರೇ ಅಲ್ಲ. ಕನ್ನಡ ಚಲನ ಚಿತ್ರಗಳನ್ನು ತೆಗೆಯಲು, ಇದರ ಮೇಲೆ ಹಣವನ್ನು ಹಾಕಲು ಹೊರಗಡೆಯಿಂದ ಬಹಳ ಜನರು ಬರುತ್ತಿದ್ದಾರೆ. ನೂರಕ್ಕೆ 80 ರಷ್ಟು ಜನರು ಹೊರಗಿನಿಂದ ಬರುತ್ತಿದ್ದಾರೆ. ನಾನು ತಮ್ಮ ಮೂಲಕ ಹೇಳುತ್ತಿದ್ದೇನೆ, ಕನ್ನಡ ಚಲನಚಿತ್ರ ರಂಗ ಬೆಳವಣಿಗೆಯಾಗಬೇಕೆಂಬ ಪ್ರಶ್ನೆಯನ್ನು ನಾವು ಒಂದು ಕಡೆ ಇಟ್ಟುಕೊಂಡು, ಮತ್ತೊಂದು ಕಡೆ ಕರ್ನಾಟಕ ಬಿಟ್ಟು ಹೊರಗಡೆ ಚಿತ್ರ ತೆಗೆದರೆ ಅದಕ್ಕೆ ನಾವು 50 ಪರ್ಸೆಂಟ್ ಮನರಂಜನಾ ತೆರಿಗೆಯನ್ನು ವಜಾ ಮಾಡುತ್ತೇವೆಂದರೆ, ಕರ್ನಾಟಕದಲ್ಲಿ ಕನ್ನಡ ಚಲನಚಿತ್ರ ರಂಗ ಈಗತಾನೆ ಏನು ಚಿಗುರು ಒಡೆಯುತ್ತಿದೆ, ಇದು ಈ ಸರ್ಕಾರದ ನೀತಿಯಿಂದ ನಾಳೆ ಒಣಗುತ್ತದೆ. ಕನ್ನಡ ಚಿತ್ರರಂಗ ಸಂಪೂರ್ಣವಾಗಿ ಕರ್ನಾಟಕವನ್ನು ಬಿಟ್ಟು ಮತ್ತೆ ತಮಿಳ್ನಾಡಿಗೆ ಹೋಗುತ್ತದೆ. ಹಿಂದೆ ಒಂದು ಕಾಲದಲ್ಲಿ ಕನ್ನಡ ಚಿತ್ರರಂಗ ತಮಿಳ್ನಾಡಿನಲ್ಲಿತ್ತು. ಕರ್ನಾಟಕ ಸರ್ಕಾರ ಅನೇಕರೀತಿಯ ಅನುಕೂಲಗಳನ್ನು, ಸೌಲಭ್ಯಗಳನ್ನು ಕೊಟ್ಟನಂತರ ಕರ್ನಾಟಕಕ್ಕೆ ಮತ್ತೆ ಬಂತು . ತಮಿಳ್ನಾಡಿನಲ್ಲಿ ಇದ್ದಂಥ ಕನ್ನಡ ನಟರೆಲ್ಲಾ ಕರ್ನಾಟಕಕ್ಕೆ ಬಂದು ಸೇರಿಕೊಂಡರು. ಕರ್ನಾಟಕದಲ್ಲಿ ನಾಲ್ಕಾರು ಸ್ಟುಡಿಯೋಗಳೂ ಸ್ಥಾಪನೆಯಾದುವು. ಈಗಾಗಲೇ ನಮ್ಮಲ್ಲಿ 3-4 ಉತ್ತಮ ಸ್ಟುಡಿಯೋಗಳಿವೆ. ಈಗ ಹೊರಗಡೆಯಲ್ಲೂ ತೆಗೆಯಬಹುದೆಂದು ಅವಕಾಶವನ್ನು ಕೊಟ್ಟು ಅದಕ್ಕೆ 50 ಪರ್ಸೆಂಟ್ ಮನರಂಜನಾ ತೆರಿಗೆ ರಿಯಾಯಿತಿ ಕೊಡುತ್ತೇವೆಂದರೆ ನಾಳೆ ಬೆಳಿಗ್ಗೆಯೇ ನಮ್ಮ ಕರ್ನಾಟಕದಲ್ಲಿರತಕ್ಕ ಸ್ಟುಡಿಯೋಗಳೆಲ್ಲಾ ದನದ ಕೊಟ್ಟಿಗೆಗಳಾಗುತ್ತವೆ.

ಶ್ರೀ ಎಸ್.ಬಂಗಾರಪ್ಪ:- ಅದು ಆಗುವುದಿಲ್ಲ. ತಾ : 31-12-1987 ಕ್ಕಿಂತ ಮುಂಚೆ ಯಾವ ಚಿತ್ರಗಳು ಸೆನ್ಸಾರ್ ಆಗಿವೆ ಅವಗಳಿಗೆ ಮಾತ್ರ ಅದು ಅಪ್ಲೈ ಆಗುವಂಥಾದ್ದು. ತಾವು ದಯವಿಟ್ಟು ತೆಗೆದುನೋಡಿ. ಕನ್ನಡ, ಕೊಡವ, ಕೊಂಕಣಿ, ತುಳು ಈ ಭಾಷೆಯ ಚಿತ್ರಗಳಿಗೆ ಮಾತ್ರ ಅದು ಅನ್ವಯಿಸುತ್ತದೆಯೇ ಹೊರತು Films censored before 31-12-1987 ಈಗಿರತಕ್ಕ ನೀತಿಯನ್ನು ನಾವು ಮುಂದುವರಿಸಿಕೊಂಡೇ ಹೋಗುತ್ತೇವೆ. ಇದಕ್ಕೆ ಯಾವುದೂ ಕೂಡ ಟಚ್ ಆಗುವುದಿಲ್ಲ. We are also equally eager. I share your views. ನಿಮ್ಮ ಅಭಿಪ್ರಾಯವನ್ನು ಬಿಟ್ಟು ನಾವು ಹೋಗುವುದಿಲ್ಲ. ಹೊರಗಡೆ ಹೋಗಿ ಚಿತ್ರಗಳನ್ನು ಮಾಡಿಕೊಂಡು ಬರುವವರಿಗೆ ನಾವು ಸಬ್ಸಿಡಿ ಕೊಡುತ್ತಾ ಹೋದರೆ ನೀವು ಹೇಳಿದಂತೆ ಪ್ರೊಡಕ್ಷನ್, ಮಾರ್ಕೆಟ್ ಎಲ್ಲಾ ಶಿಫ್ಟ್ ಆಗಿ ಕಿತ್ತುಕೊಂಡು ಹೋಗುತ್ತದೆ. ಆದರೆ ಈ ಹಿಂದೆ ನಾವು ಈ ಚಿತ್ರಗಳನ್ನು ತೆಗೆದು ಸುಮ್ಮನೆ ಕೂತಿದ್ದೇವೆ, ನಾವು ಇದರ ಮೇಲೆ ಹಣವನ್ನು ಇನ್ವೆಸ್ಟ್ ಮಾಡಿದ್ದೇವೆ, ಈಗ ನಾವು ಹಾಕಿರತಕ್ಕ ಹಣ ವಾಪಸ್ಸು ಬರದೆ ಬಹಳ ತೊಂದರೆಯಾಗಿದೆ ಎಂದು ಕೆಲವರು ಹೇಳುತ್ತಿರುವುದರಿಂದ ಕೊಡವ, ತುಳು, ಕೊಂಕಣಿ, ಭಾಷಾ ಚಿತ್ರಗಳ ಜೊತೆಗೆ ಕನ್ನಡವನ್ನೂ ಕೂಡ ನಾವು ಸೇರಿಸಿಕೊಂಡಿದ್ದೇವೆ. ಏಕೆಂದರೆ ಕೆಲವು ಕನ್ನಡ ಚಿತ್ರಗಳೂ ನಷ್ಟವನ್ನು ಅನುಭವಿಸಿರುವುವೂ ಇವೆ. ಇವರಿಗೆ ಸಹಾಯ ಮಾಡುವ ದೃಷ್ಟಿಯಿಂದ ನಾವು ಈ ರೀತಿ

ತಿದ್ದುಪಡಿಯನ್ನು ತಂದಿದ್ದೇವೆಯೇ ಹೊರತು ಈಗಿರುವುದಕ್ಕೆ ಅಟ್ಯಾಚ್ ಮಾಡತಕ್ಕದ್ದು ಇದರಲ್ಲಿ ಏನೇನೂ ಇಲ್ಲ. ಇದರ ಬಗ್ಗೆ ನೀವು ಭಾಷಣ ಮಾಡತಕ್ಕದ್ದು ಬೇಡ. ನಿಮಗೆ ನಾವು ಸಂಪೂರ್ಣವಾಗಿ ಬೆಂಬಲ ಕೊಡುತ್ತೇವೆ. ನಿಮ್ಮ ಅಭಿಪ್ರಾಯಗಳು ಇನ್ನೂ ಏನಾದರೂ ಇದ್ದರೆ ಅದನ್ನು ಹೇಳಿ, ಇನ್ನೂ ಏನೇನು ಕಂಡಿಷನ್‌ಗಳನ್ನು ಹಾಕಬೇಕೋ ಅದನ್ನೆಲ್ಲಾ ಹಾಕುತ್ತೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಂತೆ, ಕರ್ನಾಟಕ ರಾಜ್ಯದಲ್ಲಿರತಕ್ಕ ಕನ್ನಡ ಚಲನಚಿತ್ರ ನಿರ್ಮಾಪಕರಿಗೆ ಮತ್ತು ಕನ್ನಡ ಚಲನಚಿತ್ರಗಳಿಗೆ ಪ್ರೊತ್ಸಾಹ ಕೊಡಬೇಕೆಂಬ ಉದ್ದೇಶದಿಂದ ಮನರಂಜನಾ ತೆರಿಗೆಯಲ್ಲಿ 50 ಪರ್ಸೆಂಟ್ ಕನ್‌ಸೇಷನ್ ಕೊಡತಕ್ಕುದ್ದು ಪ್ರಾರಂಭವಾಯಿತು. ಈಗ ತಮ್ಮ ಪ್ರಕಾರ 31-12-87 ಕ್ಕೆ ಮುಂಚಿತವಾಗಿ ಸೆನ್ಸಾರ್ ಆಗಿರತಕ್ಕ ಎಲ್ಲ ಕನ್ನಡ, ಕೊಡವ, ಕೊಂಕಣಿ, ತುಳು ಚಿತ್ರಗಳವರಿಂದ ಮೊದಲೇ ತೆರಿಗೆಯನ್ನು ವಸೂಲ್ಮಾಡಿದ್ದೇವೆ. ಈಗ ನಿಮ್ಮ ಪ್ರಕಾರ ಈ

(3.20. ಪಿ. ಎಂ.)

ಫಿಲಂಗಳವರಿಂದ ತೆರಿಗೆಯನ್ನು ವಸೂಲು ಮಾಡಿದ್ದರೆ ಆ 50 ಪರ್ಸೆಂಟ್ ತೆರಿಗೆ ವಾಪಸ್ ಕೊಡಬೇಕೆನ್ನುವುದು ಆಗುತ್ತದೆ. ನಾನು ಹೇಳುವುದು ಏನೆಂದರೆ, ಕರ್ನಾಟಕ ರಾಜ್ಯದಲ್ಲಿ ತಯಾರಾದಂಥ ಫಿಲಂಗೆ ನೀವು ಯಾವುದೇ ಕನ್‌ಸೆಷನ್ ಕೊಟ್ಟರೂ ಸಹ ನಮ್ಮದೇನು ಅಭ್ಯಂತರವಿಲ್ಲ, ವಿರೋಧವಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಹಾಗೆ, ಇಲ್ಲಿರುವವರೇ ಬೇಕಾದರೂ ಹೊರಗಡೆ ಹೋಗಿ ಚಿತ್ರ ಮಾಡುತ್ತಾರೆಂದರೆ ಅವರಿಗೆ ಏತಕ್ಕೆ ಕನ್‌ಸೆಷನ್ ಕೊಡುತ್ತೀರಿ. ಅವರು ಕೋಟಿಗಟ್ಟಲೆ ದುಡಿದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಕರ್ನಾಟಕ ರಾಜ್ಯದಲ್ಲಿರುವಂಥ ಭಾಷೆ ಯಾವುದೇ ಇರಬಹುದು ಆ ಭಾಷೆಯಲ್ಲಿ ಇಲ್ಲಿ ಚಿತ್ರ ತೆಗೆದವರಿಗೆ ಈ ರೀತಿ ಕನ್‌ಸೆಷನ್ ಕೊಡುವುದಕ್ಕೆ ನಮ್ಮದೇನೂ ವಿರೋಧವಿಲ್ಲ. ಇಲ್ಲಿ ಏನೋ ಒಂದು ಸಂಚು ಇದೆ. ಇದು ಬಹಳ ಮುಖ್ಯವಾಗಿರತಕ್ಕಂಥಾದ್ದು. ಮಾನ್ಯ ಮುಖ್ಯಮಂತ್ರಿಗಳಿಗೆ ಇದು ಅರ್ಥವಾಗಿದೆ. ಇದು ಯಾರೋ ಹೊರಗಡೆಯಿಂದ ಬಂದು ತೆಗೆದಂಥವರೆಲ್ಲರಿಗೂ ಸಹ 31-12-1987 ಕ್ಕಿಂತ ಮುಂಚೆ ಸೆನ್ಸಾರ್ ಆದವುಗಳೆಲ್ಲಕ್ಕೂ ಸಹ ಅನುಕೂಲವಾಗುತ್ತದೆ. ಅದಕ್ಕೋಸ್ಕರ ಇದನ್ನು ಯಾವ ಕಾರಣಕ್ಕೂ ಎಕ್ಸ್‌ಟೆಂಡ್ ಮಾಡುವುದಕ್ಕೆ ಒಪ್ಪಿಗೆ ಕೊಡಲುಸಾಧ್ಯವಿಲ್ಲ. ಮತ್ತು ಮಾನ್ಯ ಮುಖ್ಯಮಂತ್ರಿಗಳು ಇದನ್ನು ಇಡುವುದಕ್ಕೆ ಮುಂಚೆ ಅಧಿಕಾರಿಗಳು ಗೊಂದಲದಲ್ಲಿದ್ದಾರೆಂದು ಕಾಣುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಕೂಡ ಗೊಂದಲದಲ್ಲಿದ್ದಾರೆ. ಏನು ಮಾಡಬೇಕೆಂದು ತಿಳಿದುಕೊಂಡರೆ ಆಮೇಲೆ ಏನು ಮಾಡಬೇಕೆನ್ನುವುದು ಗೊತ್ತಾಗುತ್ತದೆ. ಈಗ ಇಲ್ಲಿ ಮಾತನಾಡುತ್ತಿದ್ದಾರೆ. ಅವರಿಗೆ ಕ್ಲಿಯರ್ ಇಲ್ಲ. ಆದ್ದರಿಂದ ಇದನ್ನು ಒಂದು ದಿವಸ ಮುಂದೂಡಲಿ. ಸನ್ಮಾನ್ಯ ಅಧ್ಯಕ್ಷರೇ, ನನ್ನದು ಏನುವಿನಂತಿ ಎಂದರೆ, ಬಹುಶ: ನಿಮಗೂ ಇದು ಸ್ಪಷ್ಟವಾಗಿಲ್ಲ, ಇದನ್ನು ತಿಳಿದುಕೊಂಡು ನಾಳೆಬೇಕಾದರೆ ಇದನ್ನು ತೆಗೆದುಕೊಳ್ಳೋಣ. ನಮ್ಮ ಉದ್ದೇಶವೇನೆಂದರೆ, ಕರ್ನಾಟಕ ರಾಜ್ಯದಲ್ಲಿ ತಯಾರಾಗುವಂಥ ಕನ್ನಡ ಫಿಲಂಗಳಿಗೆ ನೀವು ಯಾವುದೇ ರೀತಿಯಲ್ಲಿ ಪ್ರೋತ್ಸಾಹ ಕೊಡುವುದಕ್ಕೆ ನಮ್ಮ ಅಭ್ಯಂತರವಿಲ್ಲ, ಇನ್ನು ಜಾಸ್ತಿ ಕೊಡಬೇಕಾದರೂ ಕೊಡಿ. ಆದರೆ 31-12-1987 ಕ್ಕೆ ಮುಂಚೆ ಹೊರರಾಜ್ಯದಲ್ಲಿ ತಯಾರಾಗುವಂಥ ಫಿಲಮ್‌ಗಳಿಗೆ ನೀವು ಕನ್‌ಸೆಷನ್ ಕೊಡಬೇಕೆಂದು ಯೋಚನೆ ಮಾಡುತ್ತಿದ್ದರೆ ಅದಕ್ಕೆ ಸಂಪೂರ್ಣವಾದ ವಿರೋಧವಿದೆ. ಅದು ಆಗಕೂಡದು. ಅದಕ್ಕೆ ಕೊಡಕೂಡದು. ನಮ್ಮ ರಾಜ್ಯದ ಒಳಗಡೆ ಇರತಕ್ಕಂಥ ಈ ಭಾಷೆಯ ಫಿಲಂಗಳಿಗೆ ಇಲ್ಲಿಯೇ ತಯಾರಿಸಿದವರಿಗೆ

ಪ್ರೋತ್ಸಾಹ ಕೊಡಬೇಕೆಂದು ಇದ್ದರೆ ನೀವು ಪ್ರೋತ್ಸಾಹ ಕೊಡುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ ಮೊದಲು ಕಾಲಮಿತಿ ಇತ್ತು. "in clause (b) the words "for a period of six months from the date of first release of such film in the State of Karnataka" ಇದನ್ನು ಈಗ ತೆಗೆದುಬಿಟ್ಟಿರಿ. ಟೈಂ ತೆಗೆದು ಹೊರ ರಾಜ್ಯ ಎನ್ನುವ ಪದವನ್ನು ಸೇರಿಸಿದಿರಿ. ಅದಕ್ಕೋಸ್ಕರ ಮೊದಲು ಏನಿತ್ತು ಅದು ಸರಿ ಇದೆ. ಕನ್ನಡ ಚಲನಚಿತ್ರಕ್ಕೆ ಪ್ರೋತ್ಸಾಹ ಕೊಡುವಂಥ ದೃಷ್ಟಿಯಿಂದ ಇಲ್ಲಿರುವಂಥ ನಟರಿಗೆ, ನಿರ್ಮಾಪಕರಿಗೆ, ಅವಕಾಶ ಕೊಡುವ ದೃಷ್ಟಿಯಿಂದ ಮಾಡಿರುವುದು ಸರಿಯಾಗಿದೆ. ಇಲ್ಲದಿದ್ದರೆ ನಾಳೆ ಎಲ್ಲಿಗೆ ಹೋಗುತ್ತಾರೆ ಎಂದರೆ ಹೊರಗಡೆ ಹೋಗುತ್ತಾರೆ. ಬೇರೆ ಬೇರೆ ಭಾಷೆಗಳಿಗೆ ಡಬ್ಬಿಂಗ್ ಮಾಡುವುದು ಶುರುವಾಗುತ್ತದೆ. ಅವರಿಗೆಲ್ಲ ಈ ರೀತಿ ನೀವು ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಹಿಂದೆ ಇದನ್ನು ಮಾಡಿದಾಗ ಕನ್ನಡ ಫಿಲಂಗಳಿಗೆ ಉತ್ತೇಜನ ಕೊಡಬೇಕೆನ್ನುವ ಉದ್ದೇಶವೇನಿತ್ತು ಆ ಉದ್ದೇಶ ಸಫಲವಾಗುವುದಿಲ್ಲ. ದಯವಿಟ್ಟು ಹೊರರಾಜ್ಯದಲ್ಲಿಫಿಲಮ್ ತೆಗೆದರೆ ಅದಕ್ಕೆ ರಿಯಾಯಿತಿ ಕೊಡುವುದನ್ನು ಕೈಬಿಡಬೇಕು.

ಶ್ರೀ ಎಸ್.ಬಂಗಾರಪ್ಪ:- ಮಾನ್ಯ ಯಡಿಯೂರಪ್ಪನವರೆ let us try to understand 31-12-1987ರ ಒಳಗೆ ಸೆನ್ಸಾರ್ ಆಗಿರತಕ್ಕಂಥವಕ್ಕೆ ನಾವು 6 ತಿಂಗಳ ಕಾಲ ಎನ್ನುವುದನ್ನು ತೆಗೆದಿದ್ದೇವೆ. 6 ತಿಂಗಳ ಕಾಲವನ್ನು ತೆಗೆದಿರುವುದರಿಂದ ಮುಂಚೆ ತೆಗೆದಿರತಕ್ಕ ಎಲ್ಲ ಫಿಲಮ್‌ಗಳಿಗೂ ಒಂದು ಉಪಯೋಗವೇನೆಂದರೆ, ಈಗ ನಾವು ಒಂದು ಟಾಕೀಸ್‌ನಲ್ಲಿ ಫಿಲಮನ್ನು ಹಾಕಬೇಕೆಂದು ಇಟ್ಟುಕೊಳ್ಳೋಣ. ಇವು ಹಿಂದೆ ಸೆನ್ಸಾರ್ ಆಗಿರತಕ್ಕಂಥವು. ಈಗ ಆ ಫಿಲಮನ್ನು ಹಾಕಬೇಕೆಂದರೆ ನಾವು ಹಿಂದೆ ಯಾವುದು ಕೂಡ ಹಣವನ್ನು ಕಲೆಕ್ಟ್ ಮಾಡಿಲ್ಲ. ನಾವು ಅವರಿಗೆ ಕೊಡತಕ್ಕಂಥ ಪ್ರಶ್ನೆ ಬರುವುದಿಲ್ಲ. ಈಗ ನಾವು 50 ಪರ್ಸೆಂಟ್ ಟ್ಯಾಕ್ಸ್ ಕನ್‌ಸೆಷನ್ ಕೊಡತಕ್ಕಂಥದ್ದು ಕಂಪಲ್‌ಸರಿ ಆಗುತ್ತದೆ. ಏತಕ್ಕೆದಂರೆ ಆ ಕಾಲಕ್ಕೆ ಕನಕದಾಸ ಎನ್ನತಕ್ಕಂಥ ಬಂದು ಫಿಲಮ್ ತೆಗೆದಿದ್ದರು ಎಂದು ಇಟ್ಟುಕೊಳ್ಳೋಣ. ಆ 6 ಮಂತ್ಸ್ ಪೀರಿಯಡ್‌ಗೆ ಬಂದರೆ ಮಾತ್ರ ಕನಕದಾಸ ಫಿಲಂ ತೆಗೆದವರಿಗೆ ಟ್ಯಾಕ್ಸ್ ಕನ್‌ಸೆಷನ್ ಸಿಗುತ್ತಿತ್ತು. ಈಗ ಅದನ್ನು ತೆಗೆದಿದ್ದರಿಂದ ಸಿಕ್ಸ್‌ಮಂತ್ಸ್ ಅಲ್ಲ 1-2-3 ವರ್ಷಗಳಾದರೂ ಕೂಡ ಈಗ ಸ್ಕ್ರೀನ್ ಮಾಡಬೇಕೆಂದರೆ ನಾವು ಅವರಿಗೆ ಹೆಲ್ಪ್ ಮಾಡಿದಂತಾಗುತ್ತದೆ. ನಾವು ಹಿಂದೆ ಯಾವುದನ್ನೂ ಕಲೆಕ್ಟ್ ಮಾಡಿಲ್ಲ. ಈಗ 50 ಪರ್ಸೆಂಟ್ ಕನ್‌ಸೆಷನ್ ಕೊಡುವುದರಿಂದ ಆಗ ಅವರು ಏನು ತೊಂದರೆ ತೆಗೆದುಕೊಂಡು ಧೈರ್ಯಮಾಡಿ ಕನ್ನಡ, ಕೊಡವ , ತುಳು ಇತ್ಯಾದಿ ಲಾಂಗ್‌ವೇಜ್‌ನಲ್ಲಿ ಏನು ಚಿತ್ರಗಳನ್ನು ತೆಗೆದಿದ್ದಾರೆ ಅವರಿಗೆ ಒಂದು ಸಪೋರ್ಟ್ ಕೊಟ್ಟಂತಾಗುತ್ತದೆ ಇದರಿಂದ ಅವರಿಗೆ ಹೆಚ್ಚು ಅನುಕೂಲವಾಗುತ್ತದೆ. ಕನ್‌ಸೆಷನ್ ಈಗ ಅವರಿಗೆ ಸಿಕ್ಕುತ್ತದೆ. ಬೇರೆ ಹೊರ ರಾಜ್ಯ ನೆರೆ ರಾಜ್ಯವೆನ್ನತಕ್ಕಂಥ ಪ್ರಶ್ನೆ ಇದರಲ್ಲಿ ಬರುವುದಿಲ್ಲ. ಈಗಿರತಕ್ಕಂಥ ಕಾನೂನಿನಿಂದ ರಿಪ್ರೊಡ್ಯೂಸ್ ಮಾಡಿದರೂ ಕೂಡ ಉಪಯೋಗವಾಗುತ್ತದೆ. ಹಳೆಯ ಫಿಲಮ್‌ಗಳಿಗೂ ಕೂಡ ಇದರಿಂದ ಸಂಪೂರ್ಣವಾಗಿ ಉಪಯೋಗವಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನಮ್ಮ ಕರ್ನಾಟಕ ರಾಜ್ಯದಲ್ಲಿ ತಯಾರಾದಂಥ ಫಿಲಮ್‌ಗಳಿಗೆ ಹಿಂದೆ ಕೊಟ್ಟಿಲ್ಲದೆ ಇದ್ದರೆ ನಾಳೆ ಪ್ರೊಡ್ಯೂಸ್‌ಮಾಡಿ ತೋರಿಸಿದರೆ ಕೊಡಿ. ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಇದರಲ್ಲಿ ಹೊರ ರಾಜ್ಯದಲ್ಲಿ ತಯಾರಾದಂಥ ಚಿತ್ರಗಳಿಗೂ ಎಂದು ಇದೆ. ಅದು ಬೇಡ ಎಂದು ಹೇಳಿದೆ.

ಶ್ರೀ ಎಸ್.ಬಂಗಾರಪ್ಪ:- ಈಗಿರತಕ್ಕ ಕಾನೂನು ಪ್ರಕಾರ ಕೊಡುತ್ತೇವೆ. ಕೆಲವು ಫಿಲಂಗಳನ್ನು ಹೊರಗಡೆ ತೆಗೆದುಕೊಂಡಿದ್ದಾರೆ. ಉದಾಹರಣೆಗೆ ಕೊಂಕಣಿ ಭಾಷೆಯ ಚಿತ್ರ ಎಂದು ಇಟ್ಟುಕೊಳ್ಳೋಣ. ಏಕೆಂದರೆ ಇದರಲ್ಲಿ ಕೊಂಕಣಿ ಭಾಷೆಯನ್ನೂ ನಾವು ಹಾಕಿಕೊಂಡಿದ್ದೇವೆ. ಕೊಂಕಣಿ ಭಾಷೆಯನ್ನು ಗೋವಾ, ಕಾರವಾರ, ಸ್ವಲ್ಪ ಭಾಗ ಸೌತ್ ಕೆನರಾ ಜಿಲ್ಲೆ ಹಾಗೂ ಕಾರವಾರ ಜಿಲ್ಲೆಯ ಘಟ್ಟದ ಮೇಲೂ ಕೂಡ ಮಾತನಾಡುತ್ತಾರೆ. ಅವರು ಕರ್ನಾಟಕದ ಹೊರಗಡೆ ಹೋಗಿ ಸೂಟಿಂಗ್ ಮಾಡಿದ್ದಾರೆಂದು ಇಟ್ಟುಕೊಳ್ಳೋಣ. ಈಗಿರತಕ್ಕ ನಿಯಮಾವಳಿ ಪ್ರಕಾರ ಅದಕ್ಕೆ ಅನ್ವಯವಾಗುವುದಿಲ್ಲ. ಅದನ್ನು ಹೊರಗಡೆ ಮಾಡಿದ್ದರೂ ಕೂಡ ನಾವು ಕನ್‌ಸೆಷನ್ ಕೊಡುತ್ತೇವೆ. ಏಕೆಂದರೆ ಅಪರೂಪವಾಗಿ ತೆಗೆದಿದ್ದಾರೆ, ಧೈರ್ಯಮಾಡಿ ತೆಗೆದಿದ್ದಾರೆ. ಆಗಿನ ಕಾಲದಲ್ಲಿ ತೆಗೆದಿರಬಹುದು. ಈಗ ಸ್ಟಿಕ್ಟ್ ಆಗಿ ಕಾನೂನು ಮಾಡಿದ್ದೇವೆ. ಕರ್ನಾಟಕದ ಒಳಗೆ ತೆಗೆದರೂ ಅವರಿಗೆ ಕನ್‌ಸೆಷನ್, ಸಬ್ಸಿಡಿ ಇಟ್ಟಿದ್ದೇವೆ. ಇದು ಮಾತ್ರ ಹೊರಗಡೆ ತೆಗೆದಿದ್ದರೂ ಕನ್‌ಸೆಷನ್ ಕೊಡುತ್ತೇವೆ. ಏಕೆಂದರೆ ಅಪರೂಪದ ಭಾಷೆಯಲ್ಲಿ ಒಂದನ್ನು ತೆಗೆದಿದ್ದಾರೆ. ಇದು ನಿಮಗೆ ಅನುಕೂಲ.

ಶ್ರೀ ಡಿ.ಬಿ.ಚಂದ್ರೇಗೌಡ:- ಮಸೂದೆಯ ಉದ್ದೇಶ ಏನಿದೆ ? ನಾನು ತಿಳಿದುಕೊಂಡ ಹಾಗೆ ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಕೊಡಬೇಕು. ಇದು ಪ್ರಾಸ್ಪೆಕ್ಟೀವ್ ಅಲ್ಲ ಎಂದು ಸ್ಪಷ್ಟವಾಗಿ ಹೇಳಿ ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಏತಕ್ಕೆ ಕೊಡಬೇಕಾಯಿತು ಅಂದರೆ ನಮ್ಮ ರಿಸ್ಟ್ರಿಕ್ಷನ್ ಬಂದ ಕಾರಣಕ್ಕೆ ಅವರಿಗೆ ಲಾಭ ಸಿಗಲಿಲ್ಲ. ಆದ್ದರಿಂದ ಅವರಿಗೂ ಆ ಲಾಭ ಸಿಗಬೇಕೆಂಬ ದೃಷ್ಟಿಯಿಂದ ಮಾಡಿದ್ದು. ನಾವು ಶಾಸನ ಮಾಡಿದಾಗ ಉದ್ದೇಶ ಏನಿತ್ತು? ಕರ್ನಾಟಕದಲ್ಲಿ ಕನ್ನಡ ಸಿನೇಮಾ ಪರಿಸರ ಬೆಳೆಯಬೇಕು ಎನ್ನತಕ್ಕಂಥ ಸದಿಚ್ಛೆಯಿಂದ ಮಾಡಿದೆವು. ಯಾವುದೋ ಕಾರಣದಿಂದ ಹಿಂದೆ ಮಾಡಿದರು, ಅವರಿಗೆ ಅವಕಾಶ ಇರಲಿಲ್ಲ, ಅವರಿಗೂ ಈ ಬೆನಿಫಿಟ್ ಎಕ್ಸ್‌ಟೆಂಡ್ ಆಗಬೇಕು. ಆದುದರಿಂದ ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಎಂದು ಮಾಡಿದ್ದೀರಿ. ಆದರೆ ನಾನು ತಮ್ಮನ್ನು ಕೇಳುತ್ತೇನೆ. ಎಷ್ಟು ಇಂಥ ಚಿತ್ರಗಳು ಇವೆ.? ಆ ಲಿಸ್ಟ್ ಆದರೂ ನಮಗೆ ಬೇಕಲ್ಲ. 31-12-1987 ಕ್ಕೆ ಮುಂಚೆ ಸೆನ್ಸಾಕ್ ಆಗಿರುವುದು ಎಂದರೆ ಕನ್ನಡ ಚಿತ್ರರಂಗ ಹುಟ್ಟಿದ ತಾರೀಖಿನಿಂದ ಶುರುವಾಯಿತು. 31-12-1987ರ ಮೇಲೆ 50 ಪರ್ಸೆಂಟ್ ಕನ್‌ಸೆಷನ್ ಕೊಡುವ ತೀರ್ಮಾನವನ್ನು ಕರ್ನಾಟಕ ಸರ್ಕಾರ ತೆಗೆದುಕೊಂಡಿತು, ಈ ತೀರ್ಮಾನ ತೆಗೆದುಕೊಳ್ಳುವಾಗ ಉದ್ದೇಶ ಏನಿತ್ತು ? ಶೇಕಡ 50 ರಷ್ಟು ತೆರಿಗೆ ಲಾಭ ಕನ್ನಡ ಚಿತ್ರರಂಗಕ್ಕೆ ಹೋಗಬೇಕೆಂಬ ದೃಷ್ಟಿಯಿಂದ ಮಾಡಿತ್ತು. ಈಗ ಏನಾಗುತ್ತದೆಯೆಂದರೆ, 1940 ರಲ್ಲಿ ತೆಗೆದ ವಸಂತಸೇನೆಯಿಂದ ತರಬಹುದು. ಅನುಕೂಲವಾಗಬಾರದು ಎನ್ನುವ ದೃಷ್ಟಿ ನನ್ನದಲ್ಲ ರೆಟ್ರಾಸ್ಪೆಕ್ಟೀವ್ ಇರಲಿ. ಆದರೆ Since produced only in Karnataka ರೆಟ್ರಾಸ್ಪೆಕ್ಟೀವ್ ಆಗಿ ಏನು ತಂದಿದ್ದೀರಿ, ಇದರ ಉದ್ದೇಶ ಹೀಗೆ ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:- ತಾವು 31-12-1987 ಎಂದು ಹೇಳಿದ್ದೀರಿ. 1987 ಎಂದು ಹೇಳತಕ್ಕ ನಿಗದಿ ಏನು ? 1987ನೇ ಇಸವಿಯಲ್ಲಿ ಕರ್ನಾಟಕದಲ್ಲಿಯೇ ಎಲ್ಲ ಸವಲತ್ತುಗಳು, ಅನುಕೂಲಗಳು ಇದ್ದವು. 1960 ರಿಂದ ಹಿಂದಕ್ಕೆ ಹೋದರೆ ಕರ್ನಾಟಕದಲ್ಲಿ ಯಾವುದೇ ಸವಲತ್ತು ಇಲ್ಲದೆ ಇದ್ದಾಗ 1960 ಕ್ಕಿಂತ ಹಿಂದೆ ತಯಾರಾದ ಹೊರನಾಡು ಚಿತ್ರಗಳಿಗೂ ವಿನಾಯಿತಿ ಕೊಡುತ್ತೇವೆಂದು ಹೇಳಿ ಆಗ ಗುಣಸಾಗರಿ ಚಿತ್ರ ತೆಗೆದದ್ದು.

ಛೇರ್ಮನ್:- 31-12-1987 ಕ್ಕೆ ಮುಂಚೆ . . . .

ಶ್ರೀ ವಾಟಾಳ್‌ನಾಗರಾಜ್:- ತಮಗೆ ಗೊತ್ತಿದೆ, ಮುಖ್ಯ ಮಂತ್ರಿಗಳನ್ನು ಕಳಕಳಿಯಿಂದ ಕೇಳುತ್ತಿದ್ದೇನೆ, ಚಲನಚಿತ್ರ ವಾಣಿಜ್ಯ ಸಂಸ್ಥೆಯವರು ನಿಮಗೆ ಟೋಪಿ ಹಾಕುವುದಕ್ಕೆ ಹೊರಟಿದ್ದಾರೆ. ತಾವು ಎಚ್ಚರಿಕೆಯಿಂದ ಇರಬೇಕು. ನನಗೆ ಯಾರೂ ಟೋಪಿ ಹಾಕಬಾರದೆಂದು ನಾನು ಮೊದಲೇ ಹಾಕಿದ್ದೇನೆ.

ಶ್ರೀ ಸಿ.ಬೈರೇಗೌಡ:- ಬಂಗಾರಪ್ಪನವರು ಕೂಡ ಸಿನೇಮಾದಲ್ಲಿ ಆಕ್ಟ್ ಮಾಡುತ್ತಿದ್ದರು. ಆ ಸಿನೇಮಾ ಏನಾಯಿತು. ಅದಕ್ಕೆ ಕೊಡುವುದಾದರೆ ಕೊಡಿ.

ಶ್ರೀ ವಾಟಾಳ್ ನಾಗರಾಜ್:- ನಾನು ಚಿತ್ರ ಮಾಡಿ ಅರ್ಧಕ್ಕೇ ನಿಲ್ಲಿಸಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಸರ್ಕಾರದ ಬೊಕ್ಕಸ ಲೂಟಿ ಮಾಡುವುದು ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ತಪ್ಪು ದಾರಿಗೆ ಎಳೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದೀವೆಂದು ನಾನು ತಿಳಿದುಕೊಂಡಿಲ್ಲ. ಆದರೆ ಒಂದು ವಿಷಯ ಹೇಳುತ್ತೇನೆ. ನಿಮ್ಮನ್ನು ತಪ್ಪು ದಾರಿಗೆ ತರುತ್ತಿದ್ದಾರೆ. 1987ನೇ ಇಸವಿ ಎಂದು ನಿಗದಿಮಾಡಿದ್ದೀರಿ. ತಮಗೆ ಗೊತ್ತಿದೆ ಕಂಠೀರವ ಸ್ಟುಡಿಯೋ ತಾವು ನೋಡಿದ್ದೀರಿ. ಬೇರೆ ಬೇರೆ ಸ್ಟುಡಿಯೋ ನೋಡಿದ್ದೀರಿ. ನೀವೂ ಒಂದು ಚಿತ್ರ ತೆಗೆಯುವುದಕ್ಕೆ ಹೋಗಿ ಕೈ ಸುಟ್ಟುಕೊಂಡೋ ಅಥವಾ ಅದೇನಾಯಿತೋ ಗೊತ್ತಿಲ್ಲ.

ಶ್ರೀ ಎಸ್.ಬಂಗಾರಪ್ಪ:- 31-12-1987ಕ್ಕಿಂತ ಮುಂಚೆ ಎಂಬ ಕಟ್ ಆಫ್ ಡೇಟ್ ಏತಕ್ಕೆ ಎಂದರೆ, ಆ ಕಾಲದಲ್ಲಿ ಕರ್ನಾಟಕ ರಾಜ್ಯದಲ್ಲಿ ಯಾವ ಚಲನಚಿತ್ರಗಳನ್ನು ಪ್ರೊಡ್ಯೂಸ್ ಮಾಡುತ್ತಾರೆ ಅವರಿಗೆ ಮಾತ್ರ ಕನ್‌ಸೆಷನ್, ಸಬ್ಸಿಡಿ, ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಕನ್‌ಸೆಷನ್ , ಈ 28 ವಿಚಾರಗಳಿಗೆ ಸಂಬಂಧಪಟ್ಟಿರತಕ್ಕಂಥಾದ್ದು ಈ ತಾರೀಖು. ಇಲ್ಲಿಗಿಂತ ಮುಂಚೆ ಅಂದರೆ 31-12-1987 ಕ್ಕಿಂತ ಮುಂಚೆ ಹೊರಗಡೆ ಶೂಟಿಂಗ್ ಮತ್ತೊಂದು ಮಾಡಿರತಕ್ಕ ಕೆಲವು ಕೊಂಕಣಿ, ತುಳು ಫಿಲಂಗಳು ಇದ್ದುವು. ಕನ್ನಡದಲ್ಲಿ ಮಾಡಿರುವುದೂ ಇತ್ತು. ಈ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಕನ್‌ಸೆಷನ್ ಈಗ ಸ್ಕ್ರೀನ್ ಮಾಡಿರತಕ್ಕ ಫಿಲಂಗಳಿಗೆ ಕೊಡಬೇಕೆಂದರೆ ಹೊರಗಡೆ ಹೋಗಿ ಶೂಟಿಂಗ್ ಮಾಡಿದ್ದರಿಂದ ಕೊಡುವುದಕ್ಕಾಗುವುದಿಲ್ಲ ಎಂದಾಯಿತು. ಆರು ತಿಂಗಳ ಮುಂಚೆ ಏನಿತ್ತು ಅದಕ್ಕೆ ಮಾತ್ರ ಸಿಕ್ಕಿತು. 6 ತಿಂಗಳವರೆಗೆ ಆಗಿನ ಕಾಲದಲ್ಲಿ ಎಷ್ಟು ಸಿಗುತ್ತದೆ ? ನಾವು ಯಾವುದೂ ಹಣ ಕಲೆಕ್ಟ್ ಮಾಡುವುದೂ ಅಲ್ಲ, ಮತ್ತೊಂದೂ ಅಲ್ಲ, ಸರ್ಕಾರದ ಬೊಕ್ಕಸಕ್ಕೆ ಬರತಕ್ಕ ಹಣಕ್ಕೆ ನಾವು ಟೋಪಿ ಬೀಳುವುದೂ ಅಲ್ಲ, ಎಂಥದ್ದೂ ಇಲ್ಲ. ಅಪರೂಪದಲ್ಲಿ ತೆಗೆದಿರತಕ್ಕ ಕೆಲವು ಕನ್ನಡ ಚಿತ್ರಗಳು, ಕರ್ನಾಟಕದ ಒಳಗಡೆ ತೆಗೆದಿರುವುದು ಏನಿವೆ ಅದಕ್ಕೆ ಅಪ್ಲೈ ಆಗಿಬಿಟ್ಟಿವೆ. ಅದಕ್ಕೆ ನೀವು ಪೆಟ್ಟಿ ಕೇಳಿದ್ದೀರಿ. ಅದನ್ನು ಒದಗಿಸಿಕೊಡುತ್ತೇನೆ. ಆ ಕಾಲದಲ್ಲಿ ಕರ್ನಾಟಕ ರಾಜ್ಯದ ಗಡಿ ಬಿಟ್ಟು ಹೊರಗಡೆ ತೆಗೆದಿರುವವರಿಗೆ ಲಾಸ್ ಪಾಸ್ ಆದವರಿಗೆ ಅನುಕೂಲವಾಗುತ್ತದೆ ಎಂದು ಫಿಲಂ ಛೇಂಬರ್ ಆಫ್ ಕಾಮರ್ಸ್‌ನವರು ಸರ್ಕಾರಕ್ಕೆ ಮನವಿ ಕೊಟ್ಟರು. ಅದಕ್ಕೆ ನಾವು ಏನು ಮಾಡಿದ್ದೇವೆ ಎಂದರೆ, ಫಿಲಂಗಳು ಏನೋ ಅಲ್ಪಸ್ವಲ್ಪ ಇವೆ. ಉಳಿದದ್ದೆಲ್ಲಾ ಕನ್ನಡದಲ್ಲಿ ಕರ್ನಾಟಕದಲ್ಲಿ ತೆಗೆದಿರತಕ್ಕದ್ದು ಯಥೇಚ್ಛವಾಗಿವೆ. 'ಗುಣ ಸಾಗರಿ' ;ವಸಂತಸೇನ' ಅವೆಲ್ಲಾ ಯಾವ ಯಾವುದು ಹಿಂದೆ ತೆಗೆದರು ಅವಕ್ಕೆ ಪೂರ್ತಿ ಸಿಕ್ಕಿದೆ. ಹೊರಗಡೆ ತೆಗೆದರೂ ಕೂಡ ಈಗ ಸ್ಕ್ರೀನ್ ಮಾಡಿದರೆ ಅಂದರೆ ಈಗ ಹೋಗಿ ಯಾರಾದರೂ ಸಿನಿಮಾ ಟಾಕೀಸ್‌ನಲ್ಲಿ ಹಾಕಿದರೆ ಅವರಿಗೆ ಸಪೋರ್ಟ್ ಮಾಡುವ ವಿಚಾರವೇ ಏನಾ ಸರ್ಕಾರ ತೆಗೆದುಕೊಂಡು ಹೋಗಿ ಯಾವುದೇ ಹಣ ಹಿಂದಕ್ಕೆ ಕೊಡುವುದಿಲ್ಲ. ಆ ಪಾಯಿಂಟ್ ಇದರಲ್ಲಿಲ್ಲ. ಆಮೇಲೆ ಸರ್ಕಾರದ ಖಜಾನೆಗೆ ಯಾವುದೊ ಟೋಪಿ ಬೀಳುವುದೂ ಅಲ್ಲ. ಇದರಲ್ಲಿ ಏನೇನೂ ಇಲ್ಲ. ಹಳೇ

ಫಲಂಗಳು ಅಪರೂಪವಾದ ಭಾಷೆಯಲ್ಲಿ ತೆಗದಿರುವುದಕ್ಕೆ ಸಹಾಯ ಮಾಡಿ ಅದಕ್ಕೆ ಶಕ್ತಿ ಕೊಡುವುದು ಬಿಟ್ಟರೆ ಇದರಲ್ಲಿ ಏನೇನೂ ಇಲ್ಲ. ಆಮೇಲೆ 1987 ರಿಂದ ಈಚೆಗೆ ಇರತಕ್ಕ ಷರತ್ತುಗಳು ಏನಿವೆ, ಸಬ್ಸಿಡಿ ಕೊಡಬೇಕು, ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ 50 ಪರ್ಸೆಂಟ್, 100 ಪರ್ಸೆಂಟ್ ಕನ್‌ಸೆಷನ್ ಕೊಡತಕ್ಕ ಈಗಿರುವ ಕಾನೂನು ಏನಿದೆ ಅದು ಅಭಾಧಿತವಾಗಿ ಹಾಗೇ ಉಳಿದಿದೆ. ಅದರ ವಿಚಾರ ಈ ಬಿಲ್‌ನಲ್ಲಿ ಇಲ್ಲವೇ ಇಲ್ಲ. ನಾವು ಆರ್ಡಿನೆನ್ಸ್ ಹೊರಡಿಸುವಾಗ ಕೂಡ ಅದರ ವಿಚಾರ ಮುಟ್ಟಿಲ್ಲ. ಅದರ ಬಗ್ಗೆ ಪ್ರಶ್ನೆ ಇಲ್ಲ. ಅದು ಅಷ್ಟೂ ಮುಂದುವರೆಯುತ್ತದೆ. ಅದು ಇನ್ನೂ ಕೂಡ ಬಿಗಿ ಮಾಡಬೇಕಾದರೆ ಬಿಗಿ ಮಾಡಿಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್:- ನಾನು ಹೇಳುವುದು ಒಂದು. ಆ ಭಾಷೆಯ ಚಿತ್ರಗಳಿಗೆ ವಿನಾಯಿತಿ ಕೊಡಬಾರದು ಎನ್ನುವುದು ನನ್ನ ಉದ್ದೇಶವಲ್ಲ. ಕೊಂಕಣಿ ಆಗಲಿ, ತುಳು ಆಗಲಿ, ಕೊಡವ ಆಗಲಿ ಈ ಭಾಷೆಯ ಚಿತ್ರಗಳಿಗೆ ವಿನಾಯಿತಿ ಕೊಡಬಾರದೆಂದಲ್ಲ. ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ತಿಳಿಸಿದ್ದೇನೆ. ನಮಗೆ ಒಂದೇ ಒಂದು ಜಿಜ್ಞಾಸೆ ಬಂದಿರುವುದು ಏನೆಂದರೆ, 1987 ಎಂದು ಹೇಳುತ್ತಿದ್ದೀರಿ, ಸ್ವಲ್ಪ ಹೆಚ್ಚು ಕಡಿಮೆ 1967 ಕ್ಕೆ ಹೋಗಿದ್ದರೂ ನಾನು ಸಂತೋಷಪಡುತ್ತಿದ್ದೆ. 1967ರ ಹಿಂದೆ, 1960ರ ಹಿಂದೆ ಎಂದು ಹೇಳಿದ್ದರೆ ನಾನು ಸಂತೋಷ ಪಡುತ್ತಿದ್ದೆ. ಇದು 1987.

ಶ್ರೀ ಎಸ್.ಬಂಗಾರಪ್ಪ:- 1987 ರ ಹಿಂದೆ ಎಂದರೆ 1967 ಕ್ಕೆ ಅಪ್ಲೈ ಆಗುವುದಿಲ್ಲವೆ?

ಶ್ರೀ ವಾಟಾಳ್ ನಾಗರಾಜ್:-ಅದರಿಂದೀಚೆಗೆ ತೆಗೆದಿರತಕ್ಕ ಚಿತ್ರಗಳೆಲ್ಲಾ ಎಲ್ಲಾ ಸವಲತ್ತುಗಳಿದ್ದರೂ ಹೊರಗಡೆ ತೆಗೆದಿದ್ದಾರೆ ಕರ್ನಾಟಕದಲ್ಲಿ ಸ್ಟುಡಿಯೋ ವ್ಯವಸ್ಥೆ ಇದ್ದರೂ, ಪ್ರತಿಯೊಂದು ವ್ಯವಸ್ಥೆ ಇದ್ದರೂ ತೆಗೆದಿರತಕ್ಕ ಚಿತ್ರಗಳು ಅವು.

ಶ್ರೀ ಎಸ್.ಬಂಗಾರಪ್ಪ:- 1987ಕ್ಕಿಂತ ಈ ಕಡೆ ಆ ರೀತಿ ತೆಗೆದಿದ್ದರೆ ಆ ಸವಲತ್ತುಗಳು ಈಗಿರುವ ಕಾನೂನು ಪ್ರಕಾರ ಸಿಗುವುದೇ ಇಲ್ಲ. ನಿಮ್ಮ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ನಿಮ್ಮ ಅಭಿಪ್ರಾಯ ಏನಿದೆ 1987 ರ ನಂತರ ಯಾವುದು ಯಾವುದು ತೆಗೆದಿದ್ದಾರೆ ಅವಕ್ಕೆ ಈಗಿರುವ ಕಾನೂನು ಕಂಡೀಷನ್ ಪ್ರಕಾರ ಸಬ್ಸಿಡಿ, ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ 50 ಪರ್ಸೆಂಟ್ ಅಥವಾ 100 ಪರ್ಸೆಂಟ್ ಏನಿದೆ ಅದು ಕಂಪ್ಲೀಟ್ ಕಂಟಿನ್ಯೂ ಆಗಿವೆ. 1987 ಕ್ಕಿಂತ ಮುಂಚೆ ಎಂದರೆ . . . .

ಶ್ರೀ ಬಿ.ಎಸ್.ಯಡಿಯೂರಪ್ಪ:- ಅದಲ್ಲ ಪಾಯಿಂಟ್ 50 ಪರ್ಸೆಂಟ್ ಟ್ಯಾಕ್ಸ್ ಕನ್‌ಸೆಷನ್ ಯಾವ ವರ್ಷದಿಂದ ಪ್ರಾರಂಭವಾಯಿತು ಸಾರ್ ? ದಯಮಾಡಿ ಆ ತಾರೀಖು ಹೇಳಿದರೆ ಸಮಸ್ಯೆ ಬಗೆಹರಿಯುತ್ತದೆ. 50 ಪರ್ಸೆಂಟ್ ಮನರಂಜನಾ ತೆರಿಗೆ ರಿಯಾಯಿತಿ ಕೊಡುವುದಕ್ಕೆ ಶುರು ಮಾಡಿದೆವಲ್ಲ ಅದು ಯಾವ ವರ್ಷದಿಂದ ಕರ್ನಾಟಕದಲ್ಲಿ ಇಂಟ್ರೂಡ್ಯೂಸ್ ಮಾಡಿದೆವು ? ನಾನು ಏತಕ್ಕೆ ಈ ಪ್ರಶ್ನೆ ಕೇಳುತ್ತಿದ್ದೇನೆಂದರೆ. . . .

ಶ್ರೀ ಎಸ್.ಬಂಗಾರಪ್ಪ:- 1985

ಶ್ರೀ ಬಿ.ಎಸ್.ಯಡಿಯೂರಪ್ಪ:- ಇಲ್ಲ ಸಾರ್, 10-12 ವರ್ಷಗಳಹಿಂದೆ ತಂದಿದೆ.

ಶ್ರೀ ಎಸ್.ಬಂಗಾರಪ್ಪ:- 31-3-1985

ಶ್ರೀ ಬಿ.ಎಸ್.ಯಡಿಯೂರಪ್ಪ:- 50 ಪರ್ಸೆಂಟ್ ಟ್ಯಾಕ್ಸ್ ಎಕ್ಸೆಂಪ್ಟ್ ಮಾಡತಕ್ಕದ್ದು ಸುಮಾರು 10-12 ವರ್ಷಗಳಿಂದ ಇದೆ. ತಾವು ವೆರಿಫೈ ಮಾಡಿ ನೋಡಿ. ನಮ್ಮ ಉದ್ದೇಶವೇನೆಂದರೆ, ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಕನ್‌ಸೆಷನ್ ಇದ್ದಾಗ, ಕನ್ನಡ ಚಿತ್ರಗಳನ್ನು ತೆಗೆಯುವುದಕ್ಕೆ ಎಲ್ಲ

ಅನುಕೂಲಗಳಿದ್ದರೂ ಹೊರಗಡೆ ಹೋದರೆ ಅವರ ಹಣೇಬರಹ. ಪ್ರಶ್ನೆ ಏನೆಂದರೆ ಕನ್‌ಸೆಷನ್ ಇಲ್ಲದ ಸಮಯದಲ್ಲಿ ಹೊರಗೆ ಹೋದನಲ್ಲಾ ಅವನಿಗೆ ಅನುಕೂಲ ಮಾಡಿಕೊಡಬೇಕೆನ್ನುವುದಾದರೆ ನಮ್ಮ ಅಭ್ಯಂತರ ಇಲ್ಲ. ನಾನು ಹೇಳುವುದು ಏನೆಂದರೆ, ನಮ್ಮ ರಾಜ್ಯದಲ್ಲಿ ಈ ಕನ್‌ಸೆಷನ್ ಪ್ರಾರಂಭವಾಗಿ 15-16 ವರ್ಷ ಆಯಿತು. 31-12-87ರ ಬದಲು 31-12-77 ಎಂದು ಬದಲಾವಣೆ ಮಾಡಿ ಎಂದು ವಾಟಾಳ್ ನಾಗರಾಜ್ ಅವರು ಹೇಳಿದರು. ಅದಕ್ಕೆ ನನ್ನ ವಿರೋಧ ಇಲ್ಲ. ಈಗ ಎಲ್ಲಾ ಅನುಕೂಲ ಇದ್ದಾಗ ಇಲ್ಲೇ ತೆಗೆಯದೇ ಹೊರಗಡೆ ಹೋದವರಿಗೆ ಈ ಕನ್‌ಸೆಷನ್ ಕೊಡುವ ಅಗತ್ಯವಿಲ್ಲ. ಇದು ನಮ್ಮ ಅಭಿಪ್ರಾಯ.

ಶ್ರೀ ಪಿ.ಬಸವರಾಜ್:- ಮಾನ್ಯ ಅಧ್ಯಕ್ಷರೇ, ದಿನಾಂಕ 31-12-87 ಕ್ಕಿಂತ ಮೊದಲು ಒಂದು ಕಾನೂನು ಬಂದು ಕರ್ನಾಟಕ ರಾಜ್ಯದಲ್ಲಿ ಅಂತಹ ಚಲನಚಿತ್ರಗಳು ಮೊದಲು ಬಿಡುಗಡೆ ಆದ ದಿನಾಂಕದಿಂದ 6 ತಿಂಗಳ ಅವಧಿಯವರೆಗೆ ಅದು ರಾಜ್ಯದಲ್ಲೇ ಇರಲಿ, ಹೊರ ರಾಜ್ಯದಲ್ಲೇ ಇರಲಿ ಏನು ಪ್ರೊಡಕ್ಷನ್ ಆಗಿದೆ ಆ ಚಿತ್ರಕ್ಕೆ 6 ತಿಂಗಳವರೆವಿಗೂ 50 ಪರ್ಸೆಂಟ್ ತೆರಿಗೆ ವಿನಾಯಿತಿ ಕೊಟ್ಟಿದ್ದಾರೆ. ಇದರ ಪ್ರಯೋಜನ ಕೇವಲ ನಗರ ಪ್ರದೇಶದಲ್ಲಿರುವ ಜನರಿಗೆ ಸಿಕ್ಕಿದೆ. ಈ 6 ತಿಂಗಳ ಅವಧಿ ಗ್ರಾಮಾಂತರ ಪ್ರದೇಶದಲ್ಲಿ ಬಿಡುಗಡೆಯಾದಾಗ ಹೆಚ್ಚು ಕಡಿಮೆ ಮುಗಿದೇ ಹೋಗಿರುತ್ತಿತ್ತು. ಈಗ ಆ ಗ್ರಾಮೀಣ ಜನರಿಗೂ ಅನುಕೂಲ ಸಿಗಲಿ ಎಂದು ಇದನ್ನು ಮಾಡಿದ್ದಾರೆ. ಇದನ್ನು ಸ್ವಾಗತ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಬಿ.ಚಂದ್ರೇಗೌಡ:- ನಮ್ಮದು ವಿರೋಧ ಇಲ್ಲ. ಕ್ಲಾರಿಫಿಕೇಷನ್ ಏನು ಕೇಳುತ್ತಿದ್ದೇವೆ ಎಂದರೆ, ನಿಮ್ಮ ಹತ್ತಿರ ಬಿಲ್ ಇದ್ದರೆ Short Title and commencement ಓದಿ ನೋಡಿ. "This Act may be called the Karnataka Entertainments Tax (Amendment) Act, 1992."

"(2) Provisions of section 4 shall be deemed to have come into force on the first day of April, 1989 and the remaining provisions shall be deemed to have come into force on the thirty-first day of December, 1991."

ಇದು ಒಂದು ಹೇಳಿ ಇಲ್ಲಿ ಏನು ಮಾಡಿದಿರಿ ? ರೆಟ್ರಾಸೆಕ್ಟೀವ್ ಎಫೆಕ್ಟ್ ಎಂದು ಹೇಳಿ 31-12-87 ರೆಟ್ರಾಸೆಕ್ಟೀವ್ ಏಕೆ ಕೊಟ್ಟಿದ್ದೀರಿ ಎಂದರೆ, ಕನ್ನಡ ನಾಡಿನ ಹೊರಗಡೆ ತೆಗೆದ ಚಿತ್ರಗಳಿಗೆ ಇದರ ಲಾಭ ಸಿಗಲಿಲ್ಲ, ಆ ಲಾಭ ಸಿಗಬೇಕೆನ್ನುವ ದೃಷ್ಟಿಯಿಂದ ಕೊಟ್ಟಿದ್ದೀರಿ. ಅದನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಆದರೆ ಹೀಗೆ ಮಾಡುವಾಗ ಪ್ರಾಸ್ಪೆಕ್ಟೀವ್ ಆಗಿ ಅದಕ್ಕೆ ಅಪ್ಲೈ ಮಾಡುವುದಿಲ್ಲ. ಪ್ರಾಸ್ಪೆಕ್ಟೀವ್ ಆಗಿ ಯಾವ ಚಿತ್ರಕ್ಕೆ ಸಿಗುತ್ತದೆ ಎಂದರೆ, ರಿಯಾಯಿತಿ ಕನ್ನಡ ನಾಡಿನಲ್ಲಿ ತೆಗೆದ ಚಿತ್ರಗಳಿಗೆ ಮಾತ್ರ ಸಿಗುತ್ತದೆ. ಎನ್ನುವ ಅರ್ಥ ಬರಬೇಕು. ಅದು ಬರುವಾಗ ನನಗೆ ಇದು ಅರ್ಥ ಆಗಲಿಲ್ಲ. ಸಬ್ ಕ್ಲಾಸ್-2 ರಲ್ಲಿ ಪ್ರಾವಿಷನ್ ಸೆಕ್ಷನ್ 4 ರಲ್ಲಿ ಏನು ಹೇಳಿದ್ದೀರಿ? 1-4-89 ಅಲ್ಲಿಂದ ಒಂದು ಕಟಾಫ್ ಡೇಟ್. ಡಿಸೆಂಬರ್ 1991ಕ್ಕೆ ಇನ್ನೊಂದು ಕಟಾಫ್ ಡೇಟ್. ಇದು ಒಂದಕ್ಕೊಂದು ಹೊಂದಾಣಿಕೆ ಆಗುತ್ತಾ ಇಲ್ಲ. ಉದ್ದೇಶ ಒಳ್ಳೆಯದು. ಉದ್ದೇಶವನ್ನು ನಾವು ಪ್ರಶ್ನೆ ಮಾಡುವುದೇ ಇಲ್ಲ. ಕನ್ನಡ ಚಿತ್ರಗಳು ಎಲ್ಲಾದರೂ ತಯಾರಾಗಿರಲಿ 87 ಕ್ಕೆ ಹಿಂದೆ ಕಷ್ಟವೋ, ಸುಖವೋ ಏನೋಮಾಡಿ ಮಾಡಿದ್ದಾರೆ. ಅವರಿಗೆ 50 ಪರ್ಸೆಂಟ್ ತೆರಿಗೆ ಇದೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಅವರು ವಿನಾಯಿತಿ ಕೊಡುವುದರಲ್ಲಿ ಯಾರದೂ ತಕರಾರು ಇಲ್ಲ. ನಮ್ಮದು ಇಸವಿ ಬಗ್ಗೆ ತಕರಾರು ಇರುವುದು. ತಾವು 87 ಎಂದು ಹೇಳುತ್ತಿದ್ದೀರಿ. 87ರ ಹಿಂದೆ ನಮ್ಮ ಕನ್ನಡ ಚಿತ್ರಗಳಿಗೆ ಯಾವತ್ತಿನಿಂದ ಸೌಲತ್ತುಗಳು ಶುರುವಾದವು, ಮನರಂಜನಾ ತೆರಿಗೆಯನ್ನು ಶೇಕಡಾ 50 ಭಾಗ ಮನ್ನಾ ಮಾಡತಕ್ಕ ನಿರ್ಧಾರ ಯಾವತ್ತು ಆಯಿತು ಎಂದು ಗೊತ್ತಾಗಬೇಕು. ಈ ಒಂದು ಇಸವಿಯಿಂದ ಎಷ್ಟು ಚಿತ್ರಗಳು ಹೊರಗಡೆ ತೆಗೆಯಲ್ಪಟ್ಟಿವೆ ಎನ್ನುವ ಮಾಹಿತಿ ನಮಗೆ ಪ್ರಮುಖವಾಗಿ ಬೇಕಾಗಿದೆ. 1987 ರಿಂದ ಆಚೆಗೆ ತೆಗೆದ ಹಳೇ ಚಿತ್ರಗಳು ಮತ್ತೆ ಪ್ರದರ್ಶನವಾದರೆ, ಹೊರನಾಡಿನಲ್ಲಿ ತೆಗೆದಿರಬಹುದು, ಅವುಗಳಿಗೆ ಮನರಂಜನಾ ತೆರಿಗೆ ವಿನಾಯಿತಿ ಎಂದಾಗ ನನಗೆ ಏನು ಅನ್ನಿಸಿತು ಎಂದರೆ, ಯಾವುದೇ ವ್ಯವಸ್ಥೆ ಕರ್ನಾಟಕದಲ್ಲಿ ಇಲ್ಲದೇ ಇದ್ದಾಗ, ಹಳೇ ಕಾಲದ ಚಿತ್ರಗಳನ್ನು ತಮಿಳುನಾಡಿನಲ್ಲಿ ಅಥವಾ ಇನ್ನೊಂದು ಕಡೆ ತೆಗೆದ ಚಿತ್ರಗಳು ಇರಬಹುದು, ಅವು ಮತ್ತೆ ಪ್ರದರ್ಶನಕ್ಕೆ ಬರಬೇಕಾದ ಚಿತ್ರಗಳು. ಇವತ್ತು ಹಳೇ ಚಿತ್ರಗಳು ಪ್ರದರ್ಶನಕ್ಕೆ ಬರುವುದು ಸಂತೋಷದ ವಿಷಯ. ಅದಕ್ಕೆ ಮನೋರಂಜನಾ ತೆರಿಗೆ ಕೊಡುವುದರಲ್ಲಿ ನಮ್ಮ ಅಭ್ಯಂತರ ಇಲ್ಲ. ನಾನು ಹೇಳುತ್ತಿದ್ದೇನೆ, 1987 ಎಂಬುದು ಬಹಳ ಹತ್ತಿರವಾಯಿತು . . . .

ಶ್ರೀ ಡಿ.ಬಿ.ಚಂದ್ರೇಗೌಡ:- ಅದನ್ನೆ ತಾವು ತಪ್ಪು ತಿಳಿದುಕೊಂಡಿದ್ದೀರಿ. ಈ ಪ್ರಾವಿಷನ್‌ಗೆ ರಿಸ್ಟ್ರಿಕ್ಷನ್ ಇತ್ತು. ಸೆಕ್ಷನ್ 3 (ಎ) ಸಬ್ ಸೆಕ್ಷನ್ (ಬಿ) ಓದಿದರೆ ಗೊತ್ತಾಗುತ್ತದೆ. ಅದು ಈ ರೀತಿ ಇದೆ.

"(b) in the case of a cinematograph show of a Kannada, Kodava, Konkani or Tulu film produced outside the State of Karnataka and which has secured censor Certificate issued by the Central Board of Film Certification on or before the thirty-first day of December, 1987 . . . ."

ಇಲ್ಲಿ ಸೆಕ್ಷನ್‌ನಲ್ಲಿ ಹೇಳಿದ್ದರು, ಅದಕ್ಕೆ ಆ ಡೇಟ್ ಹಾಕಿದ್ದಾರೆ. 1987ನೇ ಇಸವಿ ಡಿಸೆಂಬರ್ ಮೊದಲನೆಯ ತಾರೀಖಿನೊಳಗೆ ಯಾವ್ಯಾವ ಚಿತ್ರಗಳನ್ನು ಹೊರಗಡೆ ತೆಗೆದಿದ್ದಾರೆ ಅವರಿಗೆ ರಿಸ್ಟ್ರಿಕ್ಷನ್ ಇತ್ತು. ಏನು ಆ ರಿಸ್ಟ್ರಿಕ್ಷನ್ ಎಂದರೆ,

". . . .the rates of entertainments tax payable shall be one half of the rates specified there in for a period of six months . . . ."

ಈ ರಿಸ್ಟ್ರಿಕ್ಷನ್ ತೆಗೆದಿದ್ದಾರೆ, ಅದಕ್ಕೆ ಇಲ್ಲಿಹಾಕಿದ್ದಾರೆ. ಅದು ಪ್ರಾಸ್‌ಪೆಕ್ಟೀವ್ ಆಗಿ ಅಪ್ಲೈ ಆಗ ಕೂಡದು ಎನ್ನುವುದಷ್ಟೇ ನಮ್ಮ ಅಭಿಪ್ರಾಯ. ಮಾನ್ಯ ವಾಟಾಳ್ ನಾಗರಾಜ್‌ರವರೇ, ಈ ಸೆಕ್ಷನ್‌ನಲ್ಲಿ ರಿಸ್ಟ್ರಿಕ್ಷನ್ ಇದೆ. ಈ ಸೆಕ್ಷನ್‌ನ ರಿಸ್ಟ್ರಿಕ್ಷನ್ ತೆಗೆಯುತ್ತಿದ್ದಾರೆ. That is right. ಅದನ್ನು ನಾವು ಪ್ರಶ್ನೆ ಮಾಡುವುದಿಲ್ಲ. ಪ್ರಾಸ್‌ಪೆಕ್ಟಿವ್ ಆಗಿ ಕನ್ನಡನಾಡಿನಲ್ಲಿಯೇ ತೆಗೆದಿರತಕ್ಕ ಚಿತ್ರಗಳಿಗೆ ಮಾತ್ರ ಸಿಗುತ್ತದೆಂದು ಹೇಳಿದರೆ ಸಾಕು.

Sri. S.BANGARAPPA :- It is a very simple thing. Films produced in Karnataka ಅಂದರೆ ಕರ್ನಾಟಕದ ಒಳಗಡೆ ತೆಗೆದಿರತಕ್ಕವು, on or after 1.1.1988, Prior to 31.12.87 i.e., last day of December, 87,

ಅಂದರೆ 1-1-1988ಕ್ಕೆ ಬರುತ್ತದೆ. They are eligible for 50% tax concession. Let us analyse it. 1-1-1988 ರಿಂದ ಅಂದರೆ ಅವತ್ತಾಗಲಿ ಅಥವಾ ಅನಂತರವಾಗಲಿ ಯಾವುದೇ ಫಿಲಂ ಅನ್ನು ಕರ್ನಾಟಕದೊಳಗಡೆ ಪ್ರೊಡ್ಯೂಸ್ ಮಾಡಿದ್ದರೆ ಅವರಿಗೆ 50 ಪರ್ಸೆಂಟ್ ಟ್ಯಾಕ್ಸ್ ಕನ್ಸೇಷನ್ ಕಾನೂನು ಪ್ರಕಾರ ಸಿಗುತ್ತದೆ. ಈಪೊಂದು ಪಾಯಿಂಟ್ ಕ್ಲಿಯರ್ ಆಯಿತು. Films produced prior to 1-1-1988 ಅಂದರೆ 1-1-1988 ಕ್ಕೆ ಮುಂಚೆout side the Karnataka state ಕರ್ನಾಟಕದ ಹೊರಗಡೆ ತೆಗೆದಿರತಕ್ಕದ್ದು ಏನಾದರೂ ಇದ್ದರೆ They are eligible for 50% concession. 50 ಪರ್ಸೆಂಟ್ ಟ್ಯಾಕ್ಸ್ ಕನ್ಸೇಷನ್ ಇದ್ದರೆ ಎಲ್ಲರಿಗೂ ಅನುಕೂಲವಾಗುತ್ತದೆ. ಅದು ಸ್ವಾಗತ ಮಾಡತಕ್ಕುದ್ದು ಇದೆ. ನಿಮ್ಮ ಅಭಿಪ್ರಾಯ ಒಂದೇ, ನಮ್ಮದು ಅಭಿಪ್ರಾಯ ಅದೇ ಇದೆ. ಎಲ್ಲರದೂ ಒಂದೇ ಇದೆ. ಇಲ್ಲಿ ಆ ಪ್ರಶ್ನೆಯಿಲ್ಲ. ಈ ಅಮೆಂಡ್‌ಮೆಂಟ್ ಬಿಲ್‌ನಲ್ಲಿ films produced outside Karnataka before 31.12.87 proposed for 50% concession. ಫಿಲಮ್ಸ್ ಅನ್ನು ಹೊರಗಡೆ ತೆಗೆದರೂ ಕೂಡ, 31-12-87ಕ್ಕೆ ಮುಂಚೆ ಮಾಡಿದ್ದರೂ ಕೂಡ ನಾವು ಅವರಿಗೆ 50 ಪರ್ಸೆಂಟ್ ಟ್ಯಾಕ್ಸ್ ಕನ್ಸೀಷನ್ ಅನ್ನು ಕೊಡುತ್ತಿದ್ದೇವೆ. ಈ 50 ಪರ್ಸೆಂಟ್ ಕನ್ಸೇಷನ್ ಕೊಡುವುದರಿಂದ ನಾವು ಸ್ವಲ್ಪ ಹಣವನ್ನು ಕಳೆದುಕೊಳ್ಳುತ್ತೇವೆ. ಆದರೆ ಹಳೆಯ ಫಿಲಂಗಳನ್ನು ಅಂದರೆ ಕೊಂಕಣಿ, ಕೊಡವ ಇತ್ಯಾದಿ ಫಿಲಂಗಳನ್ನು ಧೈರ್ಯಮಾಡಿ ಆ ಕಾಲದಲ್ಲಿ ತೆಗೆದಿದ್ದಾರೆ. ಅದಕ್ಕೋಸ್ಕರ ಅವರಿಗೆ ಸಪೋರ್ಟ್ ಮಾಡಬೇಕು ಎನ್ನತಕ್ಕ ವಿಚಾರ ಇದೆ. ಇದನ್ನು ಬಿಟ್ಟರೆ ಇನ್ನೆಂತಹುದೂ ಇಲ್ಲ. ಈಗಿರತಕ್ಕ ಕಾನೂನಿನಲ್ಲಿ ಕರ್ನಾಟಕದೊಳಗಡೆ ತೆಗೆಯತಕ್ಕ ಎಲ್ಲ ಫಿಲಂಗಳು ಸೇರಿ ಹೋಗಿವೆ. ಅದರ ಬಗ್ಗೆ ನಾವು ಏನೇನೂ ಮುಟ್ಟಿಲ್ಲ. ಆದ್ದರಿಂದ ಇದರ ಬಗ್ಗೆ ಯಾವುದೇ ತಕರಾರು ಇಲ್ಲ. ತಾವುಗಳೆಲ್ಲರೂ ಇದಕ್ಕೆ ಒಪ್ಪಿಗೆ ಕೊಡಬಹುದು. ಇಷ್ಟೆ ಪಾಯಿಂಟ್.

+ ಶ್ರೀ ಸಿ.ಬೈರೇಗೌಡ:- ಮಾನ್ಯ ಅಧ್ಯಕ್ಷರೇ, ಕನ್ನಡ ಚಿತ್ರರಂಗದಲ್ಲಿ ಭಿನ್ನವಾಗಿರತಕ್ಕ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದೇನೆಂದರೆ, ಈಗ ಕೆಲವು ಇಂಟರ್ ನ್ಯಾಷನಲ್ ಆರ್ಗನೈಸೇಷನ್ಸ್ ಇವೆ. ಇಂಡೋ ಸೋವಿಯತ್ ಕಲ್ಚರಲ್ ಆರ್ಗನೈಸೇಷನ್, ಇಂಡೋ ಸೋವಿಯತ್ ಫ್ರೆಂಡ್‌ಷಿಪ್ ಆರ್ಗನೈಸೇಷನ್ಸ್, ಇಂಡೋ ಚೈನಾ ಫ್ರೆಂಡ್‌ಶಿಪ್ ಅಸೋಸಿಸಿಯೇಷನ್ ಈ ತರಹ ಸಂಘಸಂಸ್ಥೆಗಳು ಇವೆ. ಇಂತಹ ಸಂಘಸಂಸ್ಥೆಗಳು ಎರಡೂ ರಾಷ್ಟ್ರಗಳ ಮಧ್ಯೆ ಒಂದು ಮಧುರ ಬಾಂಧವ್ಯವನ್ನು ಉಂಟು ಮಾಡತಕ್ಕ ಒಂದು ಕಲ್ಚರಲ್ ಫೀಡ್ಸ್ ಮಾಡುತ್ತಾರೆ. ಈ ರೀತಿ ಮಾಡತಕ್ಕ ಸಂದರ್ಭದಲ್ಲಿ ಅದರಲ್ಲಿ ಸಿನಿಮಾಗಳನ್ನು ಅಂದರೆ ರಷ್ಯಾ ಸಿನಿಮಾಗಳನ್ನಾಗಲಿ, ಚೈನಾ ಫಿಲಂಸ್ ಆಗಲಿ, ಅದೇರೀತಿಯಾಗಿ ಬೇರೆ ಬೇರೆ ರಾಷ್ಟ್ರಗಳ ಚಿತ್ರಗಳನ್ನು ತಂದು ಇಲ್ಲಿಫಿಲಂ ಫೆಸ್ಟಿವಲ್ ಮಾಡುತ್ತಿದ್ದಾರೆ. ನಾನೀಗ ಕೇಳಪಟ್ಟೆ, ಎರಡೂ ರಾಷ್ಟ್ರಗಳ ಮಧ್ಯೆ ಮಧುರ ಸಂಬಂಧವನ್ನು ಏರ್ಪಡಿಸತಕ್ಕ ಆರ್ಗನೈಸೇಷನ್‌ಗಳು ಫಿಲಂ ಫೆಸ್ಟಿವಲ್ ಮಾಡಬೇಕಾದರೆ, ಅಂತಹ ಯಾವ ಚಿತ್ರಗಳನ್ನು ಅವರು ಇಲ್ಲಿ ಎಕ್ಸಿಬೀಟ್ ಮಾಡುತ್ತಾರೆ ಅಂತಹ ಚಿತ್ರಗಳಿಗೆ ಟ್ಯಾಕ್ಸ್ ಎಕ್ಸಮ್‌ಷನ್ ಇಲ್ಲವೇ ಎನ್ನತಕ್ಕ ಮಾತನ್ನು ಹೇಳುತ್ತಿದ್ದಾರೆ. ನಾನು ಎರಡು ಮೂರು ದಿವಸಗಳಿಂದ ಸದನದಲ್ಲಿದ್ದು ಒಂದು ವಿಷಯವನ್ನು ಪ್ರಸ್ತಾಪ ಮಾಡಿದೆ. ಇಂಡೋ ಚೈನಾ ಫ್ರೆಂಡ್‌ಶಿಪ್ ಅಸೋಸಿಯೇಷನ್ ಎನ್ನತಕ್ಕದ್ದು ಇದೆ. It is an all-India Association.

(3.50 ಪಿ. ಎಂ.)

ಅದರ ಬ್ರಾಂಚ್ ಕರ್ನಾಟಕ ರಾಜ್ಯದಲ್ಲೂ ಕೂಡ ಇದೆ.

ಕರ್ನಾಟಕ ರಾಜ್ಯದಲ್ಲಿರತಕ್ಕ ಇಂಡೋ ಚೀನಾ ಫ್ರೆಂಡ್‌ಶಿಪ್ ಅಸೋಸಿಯೇಷನ್ ನಡೆಸತಕ್ಕಂಥವರು, ಚೈನಾದಿಂದ ತರತಕ್ಕ ಕೆಲವು ಚಿತ್ರಗಳನ್ನು ಪ್ರದರ್ಶನ ಮಾಡುವುದಕ್ಕೆ , ಕೆಲವು ಥಿಯೇಟರುಗಳನ್ನು ಕೂಡ ಮಾಡಿದ್ದಾರೆ. ಅಲ್ಲಿ ಚಿತ್ರಗಳನ್ನು ತೋರಿಸಬೇಕಾಗಿದ್ದರೆ, ನಿಮಗೆ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಎಕಪ್‌ಷನ್ ಇಲ್ಲವೇ ಎನ್ನತಕ್ಕ ಮಾತನ್ನು ನಾನು ಕೇಳಿ ತಿಳಿದುಕೊಂಡಿದ್ದೇನೆ. ಈ ರೀತಿಯಾಗಿ ಸಂಘಸಂಸ್ಥೆಗಳವರು ಎರಡು ರಾಷ್ಟ್ರಗಳ ಮಧ್ಯೆ ಉತ್ತಮವಾದ ಬಾಂಧವ್ಯವನ್ನು ಉಂಟು ಮಾಡತಕ್ಕಂಥ ಕೆಲಸ ಮಾಡುವುದರಿಂದ, ತಾವು ಟ್ಯಾಕ್ಸ್‌ನ್ನು ಎಕ್ಸಂಷನ್ ಮಾಡುವುದು ಸೂಕ್ತವಾಗಿದೆ. ದಯಮಾಡಿ, ಅವಕಾಶ ಇಲ್ಲದಿದ್ದರೂ, ಇದಕ್ಕೆ ಅವಕಾಶ ಮಾಡಿಕೊಡಬೇಕೆಂಬ ಮನವಿಯನ್ನು, ನಾನು ಮಾನ್ಯ ಅಧ್ಯಕ್ಷರ ಮೂಲಕ ತಮ್ಮಲ್ಲಿ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ನಾವು 1987 ರಿಂದ ಎಷ್ಟು ಚಿತ್ರಗಳು, ಯಾವಾಗ ಎಂದು ಏನುಹೇಳಿದರೂ ಸಹ ಇವರು ಆ ಪಟ್ಟನ್ನು ಬಿಡುವಹಾಗಿಲ್ಲ, 1987 ರಿಂದ ಮಾಡಿಯೇ ಮಾಡುತ್ತೀರಿ, ನನಗೆ ಗೊತ್ತು.

ಶ್ರೀ ಎಸ್.ಬಂಗಾರಪ್ಪ:- ನಮಗೆ ಏನೂ ಇಲ್ಲ, ನೀವು ಬೇಡ ಎಂದು ಹೇಳಿದರೆ, ಹಿಂದಕ್ಕೆ ತೆಗೆದುಕೊಳ್ಳುತ್ತೇವೆ. ಆದರೆ, ಕಷ್ಟಪಟ್ಟು ತೆಗೆದಿರತಕ್ಕ, ಬೇರೆ ಬೇರೆ ಭಾಷೆಯಲ್ಲಿ ಫಿಲಂಗಳನ್ನು ತೆಗೆದಿರತಕ್ಕವರಿಗೆ ಬೆಂಬಲ ಸಿಕ್ಕುವುದಿಲ್ಲ, ಸ್ಕ್ರೀನ್ ಆಗುವುದಿಲ್ಲ, ಅವರು ಏನು ಹಣ ಹಾಕಿ ತೆಗೆದಿರುತ್ತಾರೆ, ಅವರಿಗೆ ತೊಂದರೆಯಾಗುತ್ತದೆ ಮತ್ತು ಲಾಸ್ ಆಗುತ್ತದೆ. ಇದು ಒಂದು ಇಂಡಸ್ಟ್ರಿ. ಕೊಂಕಣಿ, ತುಳು, ಕೊಡವ ಭಾಷೆಗಳ ಚಿತ್ರಗಳು ಅಪರೂಪ. ಏಕೆಂದರೆ ಅವರಿಗೆ ಸ್ಕ್ರಿಪ್ಟ್ ಇಲ್ಲ, ಲಿಪಿ ಇಲ್ಲ. ಆದರೂ ಧೈರ್ಯವಾಗಿ ಫಿಲಂ ತೆಗೆದಿದ್ದಾರೆ. ಅವರಿಗೆ ರಿಯಾಯಿತಿ ಕೊಡಬೇಕೆಂದು ಮಾಡಿದ್ದೇವೆ, ಇದು ಬೇಡ ಎಂದು ಹಿಂದಕ್ಕೆ ತೆಗೆದುಕೊಂಡರೆ, ಅವರಿಗೆ ಬೆಂಬಲ ಸಿಕ್ಕುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ನಮಗೆ ಕನ್ಸೇಷನ್ ಕೊಡಬಾರದು ಎಂದು ಇಲ್ಲ, ಸಂತೋಷ. ಇದರ ಜೊತೆಯಲ್ಲಿ ಮತ್ತೊಂದು ತಿದ್ದುಪಡಿ ತಂದಿದ್ದರೆ ಚೆನ್ನಾಗಿತ್ತೆಂದು ನನಗನಿಸುತ್ತದೆ. ಇವತ್ತು ನಮ್ಮ ಸವಲತ್ತುಗಳು ಅಂದರೆ ಶೇಕಡ 50 ಭಾಗ ಮನರಂಜನಾ ತೆರಿಗೆ ವಿನಾಯಿತಿಯನ್ನು ಕರ್ನಾಟಕದಲ್ಲಿ ತೆಗೆದಂಥ ಕನ್ನಡ ಚಿತ್ರಗಳಿಗೆ ಕೊಡುತ್ತೀರಿ. ತಾವು ಕೂಡ ನೋಡುತ್ತಿದ್ದೀರಿ. ಇತ್ತೀಚೆಗೆ, ನಮ್ಮ ಕನ್ನಡ ಚಿತ್ರಗಳ ಪರಿಸ್ಥಿತಿ ಏನು, ಎಂತಹ ಚಿತ್ರಗಳು ಬರುತ್ತಿವೆ, ಈ ಚಿತ್ರಗಳ ಮೌಲ್ಯಗಳು ಏನು, ತಾವು ಇದನ್ನು ಗಮನಿಸಬೇಕು. ಇತ್ತೀಚಿನ ದಿಗಳಲ್ಲಿ ಒಳ್ಳೆಯ ನಿರ್ದೇಶಕರ ಅಭಾವ ಇದೆ, ಒಳ್ಳೆಯ ನಿರ್ದೇಶಕರು ಸಿಕ್ಕುವುದು ಬಹಳ ಕಷ್ಟವಿದೆ. ಚಿತ್ರ ತೆಗೆಯತಕ್ಕವರು ಹೊರಗಡೆಯಿಂದ ಬರುತ್ತಾರೆ. ಕನ್ನಡ ಚಿತ್ರರಂಗದಲ್ಲಿ ಮೂರುವರೆ ಲಕ್ಷ ರೂಪಾಯಿಗಳ ಸಬ್ಸಿಡಿ ಸಿಗುತ್ತದೆ, ಮನರಂಜನಾ ತೆರಿಗೆ 50 ಭಾಗ ಬರುತ್ತದೆ ಎಂದು ಸಿಕ್ಕಾಪಟ್ಟೆ ವ್ಯಾಪಾರಕ್ಕೆ ಬರುತ್ತಾರೆ. ಈ ಚಿತ್ರಗಳನ್ನು ತೆಗೆಯುವುದಕ್ಕೆ ಎಂಥವರು ಎಂದರೆ ಕನ್ನಡ ಸಾಹಿತ್ಯ, ಕನ್ನಡ ಸಂಸ್ಕೃತಿ, ಅಥವಾ ಕರ್ನಾಟಕದ ನೆಲೆ ಯಾವುದೂ ಇಲ್ಲದೇ ಇರತಕ್ಕಂಥ ಸುಮ್ಮನೆ ಭಾಷೆ ಕನ್ನಡ ಎಂದು ಹೇಳಿಕೊಂಡು ಚಿತ್ರಗಳನ್ನು ತೆಗೆಯುತ್ತಿದ್ದಾರೆ. ಈ ಸಂದರ್ಭದಲ್ಲಿ ನನ್ನ ಮಾತನ್ನು ತಾವು ಒಪ್ಪುತ್ತೀರೆಂದು ಕಾಣುತ್ತದೆ. ನಮ್ಮ ಸಾಹಿತ್ಯ, ಸಂಸ್ಕೃತಿ, ನಮ್ಮ ಕಾದಂಬರಿಗಳನ್ನು ಉಪಯೋಗಿಸತಕ್ಕ ಚಿತ್ರಗಳು, ನಮ್ಮ ನಾಡನ್ನು ಬೆಳಗತಕ್ಕ ಚಿತ್ರಗಳನ್ನು ತೆಗೆಯತಕ್ಕ ವ್ಯವಸ್ಥೆ ಇದ್ದರೆ, ಅಂಥವರಿಗೆ ಮಾತ್ರ ಇಂತಹ ಅನುಕೂಲಗಳನ್ನು ಕೊಡುತ್ತೇವೆ ಎನ್ನತಕ್ಕ ನಿಬಂಧನೆಯನ್ನು ಹಾಕಿದರೆ ಕನ್ನಡ ಚಿತ್ರ ರಂಗದ ಮೌಲ್ಯ ಚೆನ್ನಾಗಿ ಬೆಳೆಯುತ್ತದೆ ಮತ್ತು ಒಳ್ಳೆಯ ಚಿತ್ರಗಳೂ ಬರುತ್ತವೆ ಎಂದು

ನನಗನ್ನಿಸುತ್ತದೆ. ಇತ್ತೀಚೆಗೆ ಬಂದಿರತಕ್ಕ ಕೆಲವು ಚಿತ್ರಗಳ ಹೆಸರುಗಳನ್ನು ತಾವು ಕೇಳಿರಬಹುದು. ಕೆಲವು ಕೆಟ್ಟ ಹೆಸರುಗಳುಳ್ಳ ಚಿತ್ರಗಳು ಬರುತ್ತಿವೆ. "ಹೆಂಡ್ತೀರೇ ಹುಷಾರ್" ಎನ್ನತಕ್ಕ ಚಿತ್ರ ಬಂದಿದೆ. ಇಂಥ ಸಾವಿರ ಹೆಸರುಗಳನ್ನು ತಾವೂ ನೋಡಿದ್ದೀರಿ. ಇಂತಹ ಕೆಟ್ಟ ಚಿತ್ರಗಳು ಇಂದು ಬರುತ್ತಿವೆ. ಒಂದು ಕಾಲದಲ್ಲಿ ನಮ್ಮ ಕನ್ನಡ ಚಿತ್ರಗಳು ಎಷ್ಟು ವೈಭವಕ್ಕೆ ಹಸರಾಗಿ ವಿಶ್ವದ ಮಾರುಕಟ್ಟೆಗೆ ಹೋಯಿತು. ವಿಶ್ವದ ಮಾರುಕಟ್ಟೆಯಲ್ಲಿ ಉತ್ತಮ ಚಿತ್ರಗಳನ್ನು ಕೊಡಲು ಶ್ರಮಿಸಿದ ಕಣಗಾಲ್ ಪುಟ್ಟಣ್ಣ ಅವರನ್ನು ನಾವು ಇಂದು ನೆನಸಿಕೊಳ್ಳಬೇಕು. ನಿಮಗೆ ಆಸ್ತೆ ಇದೆ, ಕಳಕಳಿಇದೆ, ಅದನ್ನು ನಾನು ಒಪ್ಪುತ್ತೇನೆ. ನಿಮ್ಮಲ್ಲಿ ಕಳಕಳಿಯ ಮನವಿ ಮಾಡಿಕೊಳ್ಳುತ್ತೇನೆ. ನಮ್ಮ ಆಡಳಿತ ವ್ಯವಸ್ಥೆಯಲ್ಲಿ ಇಂದು ಎಂತಹ ಚಿತ್ರಗಳು ಬೇಕು ಯಾವ ಚಿತ್ರಗಳು ಬೇಕು, ಕನ್ನಡ ಚಿತ್ರಗಳಿಗೆ ಮೂರೂವರೆ ಲಕ್ಷ ರೂಪಾಯಿಗಳ ಸಬ್ಸಿಡಿ ಕೊಡುತ್ತೇವೆ, ಕಲಾತ್ಮಕ ಚಿತ್ರ ತೆಗೆಯುವುದಕ್ಕೆ 4 ಲಕ್ಷ ರೂಪಾಯಿಗಳನ್ನು ಸರ್ಕಾರದಿಂದ ಕೊಡುತ್ತಿದ್ದೀರಿ. ಮತ್ತು ಅನೇಕ ಸವಲತ್ತುಗಳನ್ನು ಕೊಡುತ್ತಿದ್ದೀರಿ. ಕರ್ನಾಟಕದ ಅನೇಕ ಕಡೆ ಷೂಟಿಂಗ್ ಮಾಡತಕ್ಕ ಸ್ಥಳಗಳನ್ನು ಅನುಕೂಲವಾದ ರೀತಿಯಲ್ಲಿ ವ್ಯವಸ್ಥೆ ಮಾಡಿದ್ದೀರಿ. ನಾನು ಮುಕ್ತ ಕಂಠದಿಂದ ಸಂತೋಷಪಡುತ್ತೇನೆ. ನಾವೆಲ್ಲರೂ ಹೊರಗಡೆ ಇರದೇ ಒಳಗಡೆಯೇ ಇದ್ದರೆ, ಇದರ ಬಗ್ಗೆ ಇನ್ನೂ ಸುದೀರ್ಘವಾಗಿ ಮಾತನಾಡಬೇಕಾಗಿತ್ತು. ಇರಲಿ ಅದರ ಬಗ್ಗೆ ಈಗ ಮಾತನಾಡಿ ಏನೂ ಪ್ರಯೋಜನ ಇಲ್ಲ. ನೀವು ನಮ್ಮನ್ನು ಉದ್ದೇಶಪೂರ್ವಕವಾಗಿ ಹೊರಗೆ ಇಟ್ಟಿರಿ, ನೀವು ನಮ್ಮ ಜೊತೆ ಮಾತನಾಡಿ ನೆಂಟಸ್ತನ ಬೆಳೆಸುವುದಕ್ಕೂ ತಯಾರಾಗಿಲ್ಲ. ಅದೇಕೆ ಕೋಪದಲ್ಲಿದ್ದರೋ ನಮಗಂತೂ ಗೊತ್ತಾಗಲಿಲ್ಲ. ಅದರ ಬಗ್ಗೆ ಈಗ ಮಾತನಾಡಿ ಏನೂ ಪ್ರಯೋಜನವಿಲ್ಲ, ನಾಳೆ ಸದನ ಮುಗಿಯುತ್ತಾ ಇದೆ. ಇನ್ನು ಇವತ್ತು ನಾವು ಎಷ್ಟು ಎಂದು ಮಾತನಾಡೋಣ. ಏನೋ ಸ್ವಲ್ಪ ಅವಕಾಶ ಸಿಕ್ಕಿತು, ಇದರ ಬಗ್ಗೆ ಮಾತನಾಡುತ್ತಿದ್ದೇವೆ. ಅನೇಕ ವಿಚಾರಗಳ ಮೇಲೆ ನಾವು ಬೆಳಕು ಚೆಲ್ಲಬೇಕಾಗಿತ್ತು. ಇವತ್ತು ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ, ಕನ್ನಡ ಚಿತ್ರರಂಗ ಬಹಳ ಹೊಲಸಾಗಿದೆ. ಒಂದು ವರ್ಷದಲ್ಲಿ 70-80-100 ಚಿತ್ರಗಳು ಬರುತ್ತಾ ಇದೆ. ಇವೆಲ್ಲಾ ಚಿತ್ರಗಳಿಗೂ ಶೇಕಡ 50 ಭಾಗ ಮನರಂಜನಾ ತೆರಿಗೆ ವಿನಾಯಿತಿ ಕೊಡುತ್ತಿದ್ದೇವೆ. ಯಾವುದೇ ಚಿತ್ರವಾಗಿರಲಿ, ತಮಿಳುನಾಡು, ಆಂಧ್ರ, ಕೇರಳದಲ್ಲಿ ತೆಗೆದಂಥ ಚಿತ್ರಗಳನ್ನು ಯಥಾವತ್ತಾಗಿ, ಡಬ್ ಮಾಡಿ, ಅದೇ ಕತೆ, ಅದೇ ಸಂಗೀತ, ಯಾವುದು ತೆಗೆದರೂ ಸಹ ನಾವು 50 ಭಾಗ ತೆರಿಗೆ ವಿನಾಯಿತಿ ಕೊಡುತ್ತಿದ್ದೇವೆ. ತಾವು ಇದಕ್ಕೆ ವಿಶೇಷವಾದ ವ್ಯವಸ್ಥೆಯನ್ನು ಮಾಡಬೇಕು. ಈ ಸವಲತ್ತನ್ನು ಪಡೆಯತಕ್ಕ ಚಿತ್ರಗಳು, ಕನ್ನಡ ಸಾಹಿತ್ಯ, ಕನ್ನಡ ಸಂಸ್ಕೃತಿ, ಕರ್ನಾಟಕ ಇತಿಹಾಸಗಳನ್ನೊಳಗೊಂಡಿರತಕ್ಕ ಚಿತ್ರಗಳೇ ಆಗಿರಬೇಕು, ಅಶ್ಲೀಲ ಸಂಭಾಷಣೆ, ಕೆಟ್ಟ ವಿಚಾರಗಳಿರತಕ್ಕ ಚಿತ್ರಗಳಿಗೆ ನಾವು ಯಾವುದೇ ವಿಧವಾದ ಸವಲತ್ತುಗಳನ್ನು ಕೊಡುವುದಿಲ್ಲ ಎನ್ನತಕ್ಕಂಥ ನಿಬಂಧನೆಗಳನ್ನು ತಾವು ಮಾಡಿದರೆ ಒಳ್ಳೆಯ ಚಿತ್ರಗಳು ಹೊರಗಡೆ ಬರುತ್ತವೆ. ತಾವು ಕೇಳಿರಬಹುದು, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಕೊಡುವಾಗ, ಸಿ.ವಿ.ಶಿವಶಂಕರ್ ಎಂಬ ಒಳ್ಳೆಯ ದೊಡ್ಡ ನಿರ್ದೇಶಕ, ಒಳ್ಳೆಯ ಕತೆಗಾರ, ಎಂಥಸ್ವಚ್ಛವಾಗಿ, ಸುಂದರವಾಗಿ ಕನ್ನಡ ಸಾಹಿತ್ಯವನ್ನು ಬರೆಯುತ್ತಾರೆ, ಆ ಮನುಷ್ಯ ಹೇಳಿದ. ಆ ಮಾತನ್ನು ಹೇಳುವುದಕ್ಕೆ ನನಗೆ ಬಹಳ ನೋವಾಗುತ್ತದೆ. ನೀವು ಅವತ್ತು ಅವರಿಗೆ 10 ಸಾವಿರ ರೂಪಾಯಿಗಳನ್ನು ಕೊಟ್ಟಿರಲ್ಲ, ನನಗೆ ಶಾಲುಗೀಲು ಏನೂ ಬೇಕಾಗಿಲ್ಲ, ಇವತ್ತು ನನ್ನ ಜೀವನಕ್ಕೆ 10 ಸಾವಿರ ರೂಪಾಯಿ ಸಿಕ್ಕಿತು ಎಂದು ಹೇಳಿದ ಇಂತಹ ಪರಿಸ್ಥಿತಿಯಲ್ಲಿರತಕ್ಕ ಕನ್ನಡ ಸಾಹಿತಿಗಳು, ನಿರ್ದೇಶಕರುಗಳು ಅನೇಕ ಜನ, ಬಹಳ ದು:ಖದಲ್ಲಿ ಜೀವನ ಸಾಗಿಸುತ್ತಿದ್ದಾರೆ. ಈ ಒಂದು

ನಿಬಂಧನೆಯನ್ನು ನೀವು ಮಾಡಿದರೆ, ಇಂತಹ ಉತ್ತಮವಾದ ಸಾಹಿತಿಗಳಿಗೆ, ನಿರ್ದೇಶಕರುಗಳಿಗೆ ಅನುಕೂಲವಾಗುತ್ತದೆ. ಸೋರಟ್ ಅಶ್ವತ್ ಎಂಬುವರನ್ನು ತಾವು ಕೇಳಿದ್ದೀರಿ, ಮೈಸೂರಿನಲ್ಲಿ ಅವರ ಪರಿಸ್ಥಿತಿಯನ್ನು ಕೇಳುವವರು ಗತಿಯಿಲ್ಲ. ಇಂತಹ ಅನೇಕ ಜನ ನಿರ್ದೇಶಕರುಗಳು, ಸಾಹಿತಿಗಳು, ಇವತ್ತು ನಮ್ಮಲ್ಲಿದ್ದಾರೆ. ತಾವು ಈ ನಿರ್ದೇಶಕರು, ವಿಚಾರವಂತರ ಸಭೆ ಕರೆದು ಇದರ ಬಗ್ಗೆ ನಿರ್ಧಾರ ಕೈಗೊಳ್ಳಿ. ನನಗನಿಸುತ್ತದೆ, ಇದರಲ್ಲಿ ನಿಮಗೆ ನಿಜವಾಗಿಯೂ ಹೆಸರು ಬರುತ್ತದೆ, ನಿಮ್ಮ ಸರ್ಕಾರಕ್ಕೂ ಹೆಸರು ಬರುತ್ತದೆ. ಇವತ್ತು ಹಾದಿಗೊಂದು, ಬೀದಿಗೊಂದು ಚಿತ್ರ ಬರುತ್ತಿದೆ. ಸುಮ್ಮನೆ 15 ಸಾವಿರ ಅಡಿ ಸುತ್ತುವುದು, ತಂದು ಚಿತ್ರ ಬಿಡುವುದು. ಇದೇ ನಡೆಯುತ್ತಿದೆಯೇ ಹೊರತು ಬೇರೆ ಏನೂ ಇಲ್ಲ. ಇದು ಅತ್ಯಂತ ಅವಿವೇಕ ಹೀಗಾಗಿ ಕನ್ನಡ ಚಿತ್ರರಂಗ ತೀರಾ ಹಿಂದಕ್ಕೆ ಹೋಗುತ್ತಾ ಇದೆ. ದಯಮಾಡಿ ತಾವು ಇದರ ಬಗ್ಗೆ ಗಮನ ಹರಿಸಬೇಕು. ನಾವು ನಮ್ಮಲ್ಲಿ ಎಂಥೆಂಥ ಚಿತ್ರಗಳನ್ನು ನೋಡಿದ್ದೀರಿ. ರಂಗನಾಯಕಿ ಎಂಬ ಸುಂದರವಾದಂಥ ಚಿತ್ರವನ್ನು ತೆಗೆದಂಥ ನಿರ್ದೇಶಕರು ಕಣಗಾಲ್ ಪುಟ್ಟಣ್ಣ. ಇವತ್ತು ಅಣ್ಣ ತಮ್ಮ ಇಬ್ಬರೂ ಇಲ್ಲ. ಕಣಗಾಲ್ ಪುಟ್ಟಣ್ಣ ಇಲ್ಲ, ಕಣಗಾಲ್ ಪ್ರಭಾಕರ ಶಾಸ್ತ್ರಿಗಳಿಲ್ಲ, ಅವರೆಲ್ಲರೂ ಕನ್ನಡ ಚಿತ್ರರಂಗಕ್ಕೆ ಅಪಾರವಾದಂಥ ಕೊಡುಗೆಯನ್ನು ಕೊಟ್ಟಂಥ ಜನ. ಒಂದು ಕಾಲದಲ್ಲಿ ಶಂಕರ್‌ಸಿಂಗ್ ಎಂಬುವರಿದ್ದರು. ಕನ್ನಡ ಚಿತ್ರವನ್ನೇ ತೆಗೆಯತಕ್ಕ ಜನವೇ ಇಲ್ಲ ಎಂದಾಗ, 50-60 ಸಾವಿರ, ಲಕ್ಷ ಕೊಟ್ಟು ಮಹಾತ್ಮ ಎಂಬ ಕಂಪನಿ ಸಂಸ್ಥೆಮಾಡಿ, ಎಂದೆಂದೂ ಕೇಳದೇ ಇದ್ದಾಗ, ಪ್ರೀಮಿಯರ್ ಸ್ಟುಡಿಯೋ ಒಂದೇ ಒಂದು ಇತ್ತು. ಆ ಸ್ಟುಡಿಯೋದಲ್ಲಿ ಚಿತ್ರ ತೆಗೆದಂಥ ನಿರ್ದೇಶಕರುಗಳು, ನಿರ್ಮಾಪಕರುಗಳು ನಮ್ಮಲ್ಲಿ ಬೆಳೆದಿದ್ದಾರೆ. ಇವತ್ತು ಹೊರಗಡೆಯಿಂದ ಕಲುಷಿತ ವಾತಾವರಣ ಕನ್ನಡ ಚಿತ್ರರಂಗದ ಮೇಲೆ ಬೆಳೆಯುತ್ತಿದೆ. ಇವತ್ತು ಕನ್ನಡ ಚಿತ್ರರಂಗದಲ್ಲಿ ಏನಾಗುತ್ತಿದೆಯೆಂದರೆ, ಹಂಚಿಕೆದಾರರು ಹೊರಗಡೆಯವರು, ಚಿತ್ರ ತೆಗೆಯತಕ್ಕವರು ಹೊರಗಡೆಯವರು, ಸಾಹಿತ್ಯ ಹೊರಗಡೆ, ನಿರ್ದೇಶಕರು ಹೊರಗಡೆ, ತಾಂತ್ರಿಕ ವರ್ಗ ಹೊರಗಡೆ, ಹಣ ಮಾತ್ರ ನಮ್ಮದು ಹೋಗುತ್ತಾ ಇದೆ. ತಮಗೆ ಅತ್ಯಂತ ನೋವಿನಿಂದ ಇದನ್ನು ಹೇಳುತ್ತಾ ಇದ್ದೇನೆ. ನಮ್ಮ ಸ್ಟುಡಿಯೋಗಳ ಪರಿಸ್ಥಿತಿ ಏನಾಗಿದೆ, ಕಲಾವಿದರ ಪರಿಸ್ಥಿತಿ ಏನಾಗಿದೆಯೆಂದು ತಮಗೆ ಹೇಳುತ್ತೇನೆ. ನಮ್ಮ ಧ್ವನಿ, ಆದರೆ ಕೈ, ಬಾಯಿ, ಇವೆಲ್ಲಾ ಹೊರಗಡೆಯವರದು. ಧ್ವನಿ ನಮ್ಮದು, ಅಂಥ ನಟರು ಇದ್ದಾರೆ. ಹೆಂಗಸರ ಪಾತ್ರ ಮಾಡತಕ್ಕಂಥವರು ಕರ್ನಾಟಕದಲ್ಲಿ ಯಾರೂ ಇಲ್ಲವೋ? ಎಲ್ಲಾ ಹೊರಗಡೆಯಿಂದ ಬರಬೇಕು, ಇದು ಅತ್ಯಂತ ಶೋಚನೀಯವಾಗಿದೆ. ಕನ್ನಡ ಚಿತ್ರರಂಗ ಇವತ್ತು ತೀವ್ರವಾಗಿ ಕಲುಷಿತವಾಗಿದೆ. ಇವತ್ತು ವಾಣಿಜ್ಯ ಮಂಡಳಿಯವರು ಇದಕ್ಕೆ ಕಡಿವಾಣ ಹಾಕಬೇಕು. ತಮಗೆ ಗೊತ್ತಿರುವಹಾಗೆ, ನಮ್ಮ ಶ್ರೇಷ್ಠ ಹಿರಿಯ ಕಲಾವಿದ, ಸುಮಾರು 350-400 ಚಿತ್ರಗಳಲ್ಲಿ ಪಾತ್ರ ಮಾಡಿದಂಥ ಬಾಲಕೃಷ್ಣ ಅವರ ಸ್ಟುಡಿಯೋ ಇವತ್ತು ಏನಾಗಿದೆ, ಯಾರೂ ಕೇಳದೇ ಮೂಲೆಯಲ್ಲಿ ಕುಳಿತಿದೆ. ಇವತ್ತು ಇಂತಹ ಅನೇಕ ಸವಲತ್ತುಗಳನ್ನು ಹೊಂದಿರತಕ್ಕಂಥ ಕರ್ನಾಟಕದಲ್ಲಿ ನಮ್ಮ ಚಿತ್ರರಂಗ ತೀರಾ ಹಿಂದಕ್ಕೆ ಹೋಗುತ್ತಿದೆ. ತಮಗೆ ಸ್ವಲ್ಪವಾದರೂ ಕನ್ನಡ ಚಿತ್ರರಂಗದ ಬಗ್ಗೆ ಆಸ್ತೆ ಇದ್ದು, ಚಿತ್ರವನ್ನು ತೆಗೆದುಕೊಟ್ಟಿದ್ದೀರಿ. ಆ ಚಿತ್ರ ಹೊರಗಡೆ ಬರಲಿಲ್ಲ, ಅದು ಯಾವತ್ತು ಹೊರಗಡೆ ಬರುತ್ತದೋ ನಮಗೆ ಗೊತ್ತಿಲ್ಲ.

ಶ್ರೀ ಬಿ.ಹೆಚ್.ಬನ್ನಿಕೋಡ್:- ಆ ಚಿತ್ರ ಬಂದಿಲ್ಲ, ಈ ಚಿತ್ರ ಬಂದಿದೆ.

ಶ್ರೀ ವಾಟಾಳ್ ನಾಗರಾಜ್:- ಆದ್ದರಿಂದ ದಯಮಾಡಿ ತಾವು ಏನಾದರೊಂದು ವ್ಯವಸ್ಥೆ

ಮಾಡಿ ಎಂದು ತಮ್ಮಲ್ಲಿ ಕಳಕಳಿಯಿಂದ ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಬಂಗಾರಪ್ಪ:- ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರು ಎರಡು ಮೂರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈ ಆರ್ಡಿನೆನ್ಸ್ ರಿಪ್ಲೇಸಿಂಗ್ ಬಿಲ್ ತರತಕ್ಕಂಥ ಉದ್ದೇಶ ಏನು ಎಂದು ಹೇಳಿದೆವು ಅದರ ಬಗ್ಗೆ ಏನೂ ವ್ಯತ್ಯಾಸ ಬರುವುದಿಲ್ಲ. ಅಂಥ ಚಿತ್ರಗಳಿಗೆ ಸಹಾಯ ಮಾಡತಕ್ಕಂಥ ಸದುದ್ದೇಶ ಇಟ್ಟು, ತಂದಿರತಕ್ಕ ತಿದ್ದುಪಡಿ ಕಾನೂನು. ಇದು ಬಿಟ್ಟರೆ ಮತ್ತೆ ಯಾವ ಉದ್ದೇಶವೂ ಇಲ್ಲ. ಇದರಲ್ಲಿ ತಾವು ಎರಡು ವಿಷಯ ಪ್ರಸ್ತಾಪ ಮಾಡಿರತಕ್ಕಂಥಾದ್ದು ಇದೆ. ಅದಕ್ಕಿಂತ ಮುಂಚೆ ಶ್ರೀಮಾನ್ ಬೈರೇಗೌಡರು ಒಂದು ವಿಷಯ ಹೇಳಿದರು. ದೇಶದೇಶದ ಮಧ್ಯೆ ಸ್ನೇಹ ಸಮೃದ್ಧಿ ಮಾಡತಕ್ಕ ದೃಷ್ಟಿಯಿಂದ ಕೆಲವು ಪರಭಾಷೆಯ ಚಿತ್ರಗಳನ್ನು ಆ ರೀತಿ ಏನಾದರೂ ಮಾಡಿದ್ದರೆ, ಒಳ್ಳೆಯದು. ಈಗ ಕೆಲವು ಸಂಘ್‌ಗಳು ಇವೆ. ರಷ್ಯಾ, ಭಾರತ ಸಾಂಸ್ಕೃತಿಕ ಸಂಘ್‌ಗಳು, ಚೈನಾ, ನಮ್ಮದು, ಇತ್ಯಾದಿ ಇತ್ಯಾದಿ ಸಂಘ್‌ಸಂಸ್ಥೆಗಳೆಲ್ಲಾ ಇವೆ. ಅದರಲ್ಲಿ ಒಂದೇ ಒಂದು ವಿಚಾರ ಬರತಕ್ಕಂಥಾದ್ದು ಏನೆಂದರೆ, depending upon the meirt of each film. ಕೆಲವು ನಮ್ಮಂಥ ಸಮಾಜದ ಮೇಲೆ ಅತೀ ಕೆಟ್ಟ ಪರಿಣಾಮ ಬೀರತಕ್ಕಂಥ ಚಲನಚಿತ್ರ ಏನಾದರೂ ಬಂದರೆ ಅದನ್ನು ನಾವು ಸ್ಕ್ರೀನ್ ಮಾಡಬೇಕೆಂಬ ಕಾಲದಲ್ಲಿ, ಸಮಾಜದಲ್ಲಿ ಬಹಳ ಕೆಟ್ಟ ಪರಿಣಾಮ ಬೀರತಕ್ಕಂಥ ಚಲನಚಿತ್ರ ಆದರೆ ನಾವು ಒಪ್ಪುವುದಿಲ್ಲ, ನೀವೂ ಒಪ್ಪುವುದಿಲ್ಲ, ಅದಕ್ಕೆ ನಾವು ಬೆಂಬಲ ಕೊಡತಕ್ಕಂಥ ಪ್ರಶ್ನೆಯೇ ಬರುವುದಿಲ್ಲ. ಆದರೆ ಅಲ್ಲಿಯ ಸಾಮಾಜಿಕ ವಿಷಯವನ್ನು ತಿಳಿದುಕೊಳ್ಳತಕ್ಕಂಥ ದೃಷ್ಟಿಯಿಂದ, ಸ್ನೇಹ ಸಂವರ್ಧನೆ ಮಾಡತಕ್ಕಂಥ ದೃಷ್ಟಿಯಿಂದ ಒಂದು ಚಲನಚಿತ್ರ ಬಂದರೆ ಅದನ್ನು ಮಾಡತಕ್ಕದ್ದು, ಹಿಂದೆಯೂ ಕೂಡ ಕೆಲವು ಕನ್‌ಸೆಷನ್ ಕೊಟ್ಟಿರತಕ್ಕಂಥಾ ಉದಾಹರಣೆಗಳು ನಮ್ಮ ಮುಂದಿದೆ. ಇದು ಒಳ್ಳೆಯ ಸಲಹೆ, ಇದನ್ನು ಸರಕಾರ ಗಮನದಲ್ಲಿಟ್ಟುಕೊಳ್ಳುತ್ತದೆ.

ಶ್ರೀ ಸಿ.ಬೈರೇಗೌಡ:- ಇಂಡೋ ಚೈನೀಸ್ ಅಸೋಸಿಯೇಷನ್‌ನ ಅಪ್ಲಿಕೇಷನ್ ತಮ್ಮ ಮುಂದುಗಡೆ ಇದೆ. ಅದು ನಿಮ್ಮ ಕಮರ್ಷಿಯಲ್ ಟ್ಯಾಕ್ಸ್‌ಸ್ ಡೈರೆಕ್ಟರ್ ಎದುರುಗಡೆ ಹೋಗಿತ್ತು. ನಾನು ಅವರಲ್ಲಿ ವಿಚಾರಿಸಿದಾಗ, ಇಲ್ಲ ಇಂತಹ ಚಲನಚಿತ್ರಗಳಿಗೆ ಕನ್‌ಸೆಷನ್, ಟ್ಯಾಕ್ಸ್ ಎಕ್ಸಂಪ್ಷನ್ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದರು. ಅದಕ್ಕೆ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದನ್ನು ದಯವಿಟ್ಟು ನೋಡಿ. . ನೀವು ಹೇಳಿದಂತೆ ಚಿತ್ರಗಳು ಒಳ್ಳೆಯದಾಗಿರಬೇಕು, ನೀವು ನೋಡಿ, ಪರವಾಗಿಲ್ಲ, ಇದು ಕೆಟ್ಟ ಪರಿಣಾಮ ಬೀರುವುದಿಲ್ಲ ಎಂದರೆ ಅಂತಹದಕ್ಕೆ ದಯವಿಟ್ಟು ಎಕ್ಸಂಪ್ಷನ್ ಕೊಡುವುದಕ್ಕೆ ತಾವು ದಯವಿಟ್ಟು ಅವಕಾಶ ಮಾಡಿಕೊಡಿ.

ಶ್ರೀ ಎಸ್.ಬಂಗಾರಪ್ಪ:- ಅದನ್ನು ನೋಡೋಣ, ಅದು ಯಾವುದು ಏನು ಎಂದು ನಾನು ವಿಚಾರ ಮಾಡಿಸುತ್ತೇನೆ. ಮಾನ್ಯ ವಾಟಾಳ್‌ರವರು ಹೇಳಿದುದರಲ್ಲಿ ಬಹಳ ಅರ್ಥ ಇದೆ. ಏತಕ್ಕೆಂದರೆ, ನಮ್ಮಲ್ಲಿ ಮೇಲ್ಮಟ್ಟದ ಚಲನಚಿತ್ರಗಳು ಬಂದರೆ ಅದರಿಂದ ಸಾಹಿತ್ಯ ವೃದ್ಧಿಯಾಗುತ್ತದೆ, ಕಲೆವೃದ್ಧಿಯಾಗುತ್ತದೆ, ಒಳ್ಳೊಳ್ಳೆಯ ಪ್ರತಿಭಾವಂತ ಕಲಾವಿದರು, ನಿರ್ದೇಶಕರು ಮತ್ತು ತಂತ್ರಜ್ಞರು, ತಾಂತ್ರಿಕ ಕ್ಷೇತ್ರದಲ್ಲಿ ಪರಿಣತರಾಗಿರತಕ್ಕಂಥವರು ಬೆಳಕಿಗೆ ಬರುತ್ತಾರೆ ಎಂದು ಹೇಳುವುದಾದರೆ, ಮಾನ್ಯ ಸದಸ್ಯರು ಹೇಳಿದುದರಲ್ಲಿ ಅರ್ಥ ಇದೆ, ಆದರೆ ಒಂದು ವಿಷಯವೇನೆಂದರೆ, ಸಬ್ಸಿಡಿ ಕೊಡಬೇಕೆಂದರೆ, ಅವರು ಏನು ವಿಚಾರ ಮಾಡಿದ್ದಾರೆ ಎಂದರೆ, ಮೊದಲು ಕನ್ನಡ ಚಲನಚಿತ್ರ ಕ್ಷೇತ್ರ ಬೆಳೆಯಲಿ ಎಂಬ ದೃಷ್ಟಿಯಿಂದ ಮಾಡಿದ್ದಾರೆ. ಇದರಲ್ಲಿ ಎರಡು ಅಭಿಪ್ರಾಯ ಇದೆ, ಒಂದು ಚೆನ್ನಾಗಿ ಬೆಳೆಯಲಿ, ಚಲನಚಿತ್ರಗಳು ಬರಲಿ ಎಂಬುದು, ಈಗ

ಬೇಕಾದಷ್ಟು ಸಿನಿಮಾ ಮಂದಿರಗಳು ಇವೆ, ಕನ್ನಡ ಚಲನಚಿತ್ರಗಳಿಗೆ ಸಿನಿಮಾ ಮಂದಿರಗಳೇ ಸಿಗುವುದಿಲ್ಲ ಎನ್ನುವ ಒಂದು ಕಾಲ ಇತ್ತು. ಈಗ ಪರವಾಗಿಲ್ಲ, ಕನ್ನಡ ಚಿತ್ರಗಳು ಸಂಖ್ಯೆ ದೃಷ್ಟಿಯಿಂದ ಈಗ ಸ್ವಲ್ಪ ಬೆಳವಣಿಗೆಯಾಗುತ್ತಿವೆ. ಆದರೂ ಕೂಡ ನಮಗೆ ಸಿನಿಮಾ ಮಂದಿರಗಳು ಸಿಗುತ್ತಿಲ್ಲ ಎಂಬ ಮಾತನ್ನು ಜೊತೆ ಜೊತೆಗೇ ಕೇಳುತ್ತಿದ್ದೇವೆ. ಒಂದು ಕಡೆ ಸಂಖ್ಯೆ ಜಾಸ್ತಿಯಾಗುತ್ತಿದೆ, ಇನ್ನೊಂದು ಕಡೆಗೆ ಅದು ಮೇಲ್ಮಟ್ಟಕ್ಕೆ ಬರಲಿ ಅದರ ಗುಣಮಟ್ಟ ಶ್ರೇಷ್ಠವಾಗಿರಲಿ ಎಂದು ಎರಡು ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಹೋಗತಕ್ಕಂಥ ಸಂದರ್ಭ ಇದೆ. ನಾವು ಸಬ್ಸಿಡಿ ಕೊಡಬೇಕಾದರೆ ಕೆಲವು ನಿಯಮಗಳನ್ನು ಜಾರಿ ಮಾಡಿ ಅಂದರೆ ಅದನ್ನು ತಂದು, ಕರ್ನಾಟಕದ ಒಳಗಡೆ ತೆಗೆಯತಕ್ಕಂಥ ಚಿತ್ರಕ್ಕೇ ನಾವು ವಿನಾಯಿತಿ ಕೊಡತಕ್ಕುದ್ದು ಎಂದು ಹೇಳಿದ್ದೇವೆ. ಇದರ ಉದ್ದೇಶವೇನೆಂದರೆ ಸಂಖ್ಯೆ ಬೆಳೆದು ಬರಲಿ, ಮತ್ತು ಚಿತ್ರೋದ್ಯಮ ಕನ್ನಡ ನಾಡಿನಲ್ಲಿ ಬೆಳೆದು ಬರಲು ಮತ್ತು ತಳ ಊರುವುದಕ್ಕೆ ಅನುಕೂಲವಾಗುತ್ತದೆ. ಅದರಲ್ಲೂ ಕೂಡ ಬೆಂಗಳೂರಿನ ಹವಾಮಾನ ಪರಿಸ್ಥಿತಿ, ಕರ್ನಾಟಕದಲ್ಲಿ ಸಿಗತಕ್ಕಂಥ ಅನೇಕ ದೃಷ್ಯಗಳು ಇದನ್ನೆಲ್ಲಾ ಗಮನದಲ್ಲಿಟ್ಟು ಇನ್ನೂ ಕೂಡ ಬಹಳ ಟ್ಯಾಪ್ ಮಾಡಿ, ಬಹಳ ಉಪಯೋಗ ಮಾಡುವುದಕ್ಕೆ ಇಲ್ಲಿ ಸದಾವಕಾಶ ಹೆಚ್ಚಾಗಿದೆ. ಈ ದೃಷ್ಟಿಯಿಂದ, ಸಬ್ಸಿಡಿ ಕೊಡುವುದಾಗಲೀ, ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಕನ್‌ಸೆಷನ್ ಕೊಡುವ ಉದ್ದೇಶ ಏನೆಂದರೆ, ಇನ್ನೂ ಕೂಡ ಹೆಚ್ಚು ಹೆಚ್ಚಾಗಿ ಚಲನಚಿತ್ರಗಳನ್ನು ತಯಾರು ಮಾಡಿ ಹೊರಗಡೆ ತಂದು ಬಿಡಲಿ ಎಂಬ ದೃಷ್ಟಿಯಿಂದ ಅವರೆಲ್ಲ ಮಾಡಿದ್ದಾರೆ. ಆದುದರಿಂದ ಈ ರೀತಿ ಇದೆ. ತಾವು ಹೇಳಿದಂತೆ ಗುಣಮಟ್ಟಕ್ಕೆ ನಾವು ಗಮನ ಕೊಡದೇ ಹೋದರೆ, ಬಹಳ ಕಚಡ ಫಿಲ್ಮ್‌ಗಳು ಕನ್ನಡದಲ್ಲಿ ಬಂದು ಕೆಟ್ಟ ಹೆಸರು ಬಂದು ಕುಳಿತುಕೊಂಡು ಬಿಡುತ್ತದೆ ಎಂಬುದು ವಿವೇಚನಾಶೀಲರು ಮಾಡತಕ್ಕ ವಿಚಾರ. ಅದನ್ನು ಗಮನದಲ್ಲಿಟ್ಟುಕೊಳ್ಳೋಣ. ಅದರ ಬಗ್ಗೆ ಬಹಳ ವಿವರವಾಗಿ ಚರ್ಚೆಮಾಡಬೇಕಾಗುತ್ತದೆ. ಅದನ್ನು ಸಾಂದರ್ಭಿಕವಾಗಿ ತೆಗೆದುಕೊಂಡು ಹೋಗಬೇಕಾಗುತ್ತದೆ. ಅದನ್ನು ಸರಕಾರ ಗಮನದಲ್ಲಿಟ್ಟುಕೊಳ್ಳುತ್ತದೆ ಎಂಬ ಮಾತನ್ನು ಹೇಳುತ್ತೇನೆ. ಈ ಒಂದು ಮಸೂದೆ ಏನಿದೆ ಇದು ಎರಡು ವಿಚಾರಗಳನ್ನು ಒಳಗೊಂಡಿದೆ. ನಾವು ಕೆಲಕ್ಟ್ ಮಾಡಿದ ಹಣದಲ್ಲಿ ಹೆಚ್ಚಾಗಿ ಸ್ಥಳೀಯ ಸಂಸ್ಥೆಗಳಿಗೆ ಕೊಡಬೇಕೆನ್ನುವುದು ಒಂದು. ಎರಡನೆಯದು ಕೊಡವ, ಕೊಂಕಣಿ ತುಳು ಮತ್ತು ಆಗಿನ ಕಾಲದ ಕೆಲವು ಕನ್ನಡ ಭಾಷೆಯ ಚಿತ್ರಗಳಿಗೆ ಸಹಾಯ ಮಾಡತಕ್ಕುದ್ದು. ಈಗ ಸ್ಕ್ರೀನ್ ಮಾಡಿದರೂ ಬೆನಿಫಿಟ್ ಅವರಿಗೆ ಆಗಬೇಕು. ಈಗ ಆರು ತಿಂಗಳು ಎನ್ನುವುದನ್ನು ತೆಗೆದರೆ ಅವರಿಗೆ ಕೂಡ ಬೆನಿಫಿಟ್ ಹೋಗುತ್ತದೆ ಎಂಬ ಉದ್ದೇಶ, ಇದಕ್ಕೆ ತಾವು ಬೆಂಬಲ ಕೊಡಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ:- ಹಿಂದೆ ಜೆ.ಹೆಚ್.ಪಟೇಲರು ಒಂದು ಸಿನಿಮಾ ತೆಗೆದಿದ್ದರು ಅದಕ್ಕೆ ಏನಾದರೂ ಕನ್‌ಸೆಷನ್ ಸಿಗುತ್ತದೆಯೇ ?

ಶ್ರೀ ಎಸ್.ಬಂಗಾರಪ್ಪ:- ರಾಜಕಾರಣಿಗಳು ಯಾವ ಯಾವ ಫಿಲ್ಮ್‌ನ ತೆಗೆದಿದ್ದಾರೆ ಅಷ್ಟನ್ನೂ ಪಟ್ಟಿ ಮಾಡಿ, ಆ ಚಿತ್ರಗಳು ಹೊರಗಡೆ ಬರಬೇಕು, ಇಲ್ಲವೇ ಅದರ ಸುದ್ದಿಯನ್ನು ನಾವು ವಿಚಾರ ಮಾಡಬಾರದು. ಈ ಎರಡರ ಪೈಕಿ ಒಂದು ತೀರ್ಮಾನ ಮಾಡುವುದು ಒಳ್ಳೆಯದು.

ಛೇರ್ಮನ್:- ಪ್ರಸ್ತಾವ ಏನೆಂದರೆ, "1992ರ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2 ರಿಂದ 5ರವರೆಗೆ.

ಛೇರ್ಮನ್:-"ಖಂಡ 2 ರಿಂದ 5ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2ರಿಂದ 5ರವರೆಗೆ ಎರಡೂ ಸೆರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ.

ಛೇರ್ಮನ್:- ಪ್ರಸ್ತಾವ ಏನೆಂದರೆ, "ಮೊದಲನೇ ಖಂಡ, ದೀರ್ಘ್ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೇ ಖಂಡ, ದೀರ್ಘ್ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ.

ಶ್ರಿ ಎಸ್.ಬಂಗಾರಪ್ಪ:- (ಮುಖ್ಯಮಂತ್ರಿಯವರು):- 1992ರ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಛೇರ್ಮನ್:- ಪ್ರಸ್ತಾವ ಏನೆಂದರೆ, " 1992ರ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

1992ರ ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ.

ಪರ್ಯಾಲೋಚನಾ ಪ್ರಸ್ತಾವ

ಶ್ರಿ ಬ್ಲೇಸಿಯಸ್.ಎಂ.ಡಿಸೌಜ : (ಕಾನೂನು ಸಚಿವರು):- ಮಾನ್ಯ ಅಧ್ಯಕ್ಷರೇ, 1992ರ ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಬ್ಲೇಸಿಯಸ್.ಎಂ.ಡಿಸೌಜ :- (ಕಾನೂನು ಸಚಿವರು):- ಮಾನ್ಯ ಅಧ್ಯಕ್ಷರೇ, ಈ ಮಸೂದೆಯಲ್ಲಿ ಎರಡು ತಿದ್ದುಪಡಿಗಳನ್ನು ನಾವು ಏನು ತಂದಿದ್ದೇವೆ ಇದರಲ್ಲಿ ಇದುವರೆಗೂ ನಮ್ಮ ಮಂತ್ರಿಗಳಿಗೆ, ಸ್ಪೀಕರ್, ಡೆಪ್ಯುಟಿ ಸ್ಪೀಕರ್, ಛೇರ್ಮನ್, ಡೆಪ್ಯುಟಿ ಛೇರ್ಮನ್ ಹಾಗೂ ಶಾಸಕರುಗಳಿಗೆ 10 ಸಾವಿರ ರೂಪಾಯಿಗಳವರೆಗೂ ಟ್ರೈನ್ ಮತ್ತು ಏರ್ ಟಿಕೆಟ್ಸ್ ಅನ್ನು ನಮ್ಮ ಅಕೌಂಟ್ಸ್ ಕಛೇರಿಯಲ್ಲಿ ಕೊಡುತ್ತಿದ್ದರು. ಅವರು 10 ಸಾವಿರ ರೂಪಾಯಿಗಳವರೆಗೂ ಭರ್ತಿಮಾಡಿ ಕೊಡುತ್ತಿದ್ದರು. ಇದರಲ್ಲಿ ನಮ್ಮ ಸದಸ್ಯರಿಗೆ ಬಹಳಷ್ಟು ಕಷ್ಟವಾಗುತ್ತಿತ್ತು. ಕೆಲವು ಕಡೆ ಟಿಕೆಟ್ ಸಿಗದೆ ಇದ್ದ ಕಾರಣ, ಅದಕ್ಕೆ ನಾವು ಈ ಸಲ 10 ಸಾವಿರ ರೂಪಾಯಿಗಳನ್ನು ಕ್ಯಾಶ್ ಮುಖಾಂತರ ಕೊಡುವ ಒಂದು ತಿದ್ದುಪಡಿ ತಂದಿದ್ದೇವೆ. ಏಪ್ರಿಲ್ ತಿಂಗಳಲ್ಲಿ 5 ಸಾವಿರ ರೂಪಾಯಿ, ಅಕ್ಟೋಬರ್ ತಿಂಗಳಲ್ಲಿ 5 ಸಾವಿರ ರೂಪಾಯಿ ಕ್ಯಾಶ್ ಕೊಡಬೇಕೆನ್ನುವುದು ಒಂದು. ನಮ್ಮ ಶಾಸಕರುಗಳು ಏನು ನಿವೃತ್ತಿಯಾಗಿದ್ದಾರೆ ಅವರಲ್ಲಿ ಕೆಲವರು ಬಹಳ ಕಷ್ಟದಲ್ಲಿ ಇರುತ್ತಾರೆ. ನಿಮಗೆ ಗೊತ್ತಿರಬಹುದು, ಎರಡು ವರ್ಷಗಳ ಹಿಂದೆ ನಮ್ಮ ಮಾನ್ಯ ಶಾಸಕರೊಬ್ಬರು ನಿಧನರಾದಾಗ